Mr. SPEAKER.—During the course of the Budget debate the Member may ask and he will reply.

Sri K. LAKKAPPA.—I wanted to ask him about the major irrigation, minor irrigation and other projects.

Mr. SPEAKER.—This is not the occasion. The Member may kindly mention all this in his speech on the Budget.

(*Sri K. Lakkappa sat down murmuring*)

Mr. SPEAKER.—It is most distressing to make remarks of this kind. First of all, I tried not to hear it. But he goes on. There must be a limit. Let the Member not do it again.

Sri K. LAKKAPPA.—I did not mean any disrespect to the Chair Sir.

Mr. SPEAKER.—Now Sri A. P Appanna will commence. The PSP has taken two hours and one minute as against one hour, forty-five minutes to which they are entitled. The Congress has taken two hours and forty-seven minutes. Independents have taken one hour fourteen minutes. Sri C. J. Muckannappa has already spoken.

Sri C. J. MUCKANNAPPA.—No, no extension ?

Mr. SPEAKER.—Which is the day to be got is the point. It is so tight-packed. The Business Advisory Committee knew it full well.

Sri C. J. MUCKANNAPPA.—Sir, please permit me to make a request.

Mr. SPEAKER.—Whatever it is, no requests on the Floor of the House are allowed. Members may meet me in my chambers or send me a slip; if it is all right, I will allow just as I allowed in the case of Sri S. M. Krishna.

Sri C. J. MUCKANNAPPA.—It is in regard to the decision taken by the Chair, whether a copy of the judgment delivered by the Hon'ble Speaker be served on the party concerned—that is what I wanted to know. Whether such a practice is followed anywhere in any Legislature—that is what I wanted to know because it is not mentioned in the Rules of Procedure, even in the Lok Sabha. That is why I wanted to know.

Mr. SPEAKER.—If the Hon'ble Member reads the rules and is not able to contain himself, he can talk about it in my chambers rather than disturbing the House.

Sri C. J. MUCKANNAPPA.—Please excuse me, Sir. I will never go against the wishes of the Speaker.

Mr. SPEAKER.—Let me judge it by the future events. I have ceased to make any study. The other day Members were pleased to ask me: what exactly is the function of the Deputy Speaker, Parliamentary Secretary and so on.

(*Sri C. J. Muckannappa stood up to speak*)

Mr. SPEAKER.—Order, order. Sri A. P. Appanna may speak. No member should think he is above rules.

Sri C. J. MUCKANNAPPA.—No, Sir. I have made up my mind not to go against the wishes of the Speaker. I have made up my mind long ago.

BUDGET ESTIMATES FOR 1965-66.

General Discussion.—(*Debate Continued.*)

†ಶ್ರೀ ಎ. ಪಿ. ಅಪ್ಪಣ್ಣ (ವೀರರಾಜಪೇಟೆ).—ಅಧ್ಯಕ್ಷರೇ, ಈ ಬಡ್ಜೆಟ್ಟಿನ ವಿಚಾರವಾಗಿ ನನ್ನ ಕೆಲವು ಅಭಿಪ್ರಾಯಗಳನ್ನು ಸಭೆಯ ಮುಂದೆ ಇಡಲು ಇಚ್ಛೆಪಡುತ್ತೇನೆ. ಈ ದೇಶದ ಹಣಕಾಸಿನ ಪರಿಸ್ಥಿತಿ ಎಷ್ಟು ತೊಂದರೆಯಲ್ಲಿವೆ ಎಂಬ ವಿಚಾರವಾಗಿ ಆಲೋಚನೆ ಮಾಡುವಂತಹ ಸಂದರ್ಭದಲ್ಲಿ ನಮ್ಮ ದೇಶದ ಆಹಾರ ಪರಿಸ್ಥಿತಿಯ ವಿಚಾರವಾಗಿಯೂ ಸಹ ಆರ್ಥಿಕ ಮಂತ್ರಿಯವರು ತಮ್ಮ ಭಾಷಣದಲ್ಲಿ ನಿರೂಪಿಸಿದ್ದಾರೆ. ಅವರ ಭಾಷಣದಲ್ಲಿ ಕಳೆದ ವರ್ಷ ನಮ್ಮಲ್ಲಿ ಆಹಾರದ ಪರಿಸ್ಥಿತಿ ಎಷ್ಟು ವಿಷಮಕ್ಕೆ ಏರಿತ್ತೋ ಅಷ್ಟೇ ವಿಷಮಕ್ಕೆ ಏರಿದಂತಹ ರೀತಿಯಲ್ಲಿ ನಾವು ಕಾರ್ಯಕ್ರಮಗಳನ್ನು ಕೈಕೊಂಡಿದ್ದೇವೆ. ಆದ್ದರಿಂದ ಈ ವರ್ಷ ಆ ರೀತಿಯ ಒಂದು ವಿಷಮತೆಗೆ ಬರಲಾರದು ಎಂಬ ಒಂದು ಆಶೆಯನ್ನೂ ಸಹ ತೋರಿಸಿದ್ದಾರೆ. ಕಳೆದ ವರ್ಷ ಆಹಾರದ ಪರಿಸ್ಥಿತಿ ವಿಷಮಕ್ಕೆ ಬರಲಿಕ್ಕೆ ಅನೇಕ ಕಾರಣಗಳು ಇದ್ದವು. ಆ ರೀತಿ ವಿಷಮತೆಗೆ ಬರುತ್ತದೆ ಎಂಬ ಮುನ್ಸೂಚನೆ ಸರ್ಕಾರಕ್ಕಾಗಲಿ ನಮಗಾಗಲೀ ಇರಲಿಲ್ಲ. ಕಳೆದ ಸಲ ಆದಂತಹ ವಿಷಮತೆಯನ್ನು ಗಮನಿಸಿ ಈ ರಾಜ್ಯದ ಜನತೆ ಮತ್ತು ಸರ್ಕಾರ ಪಟ್ಟಂತಹ ಕಷ್ಟದ ಅನುಭವದಮೇಲೆ ಮುಂದೆ ಅಂತಹ ತೊಂದರೆ ಬರಬಾರದು ಎಂಬ ದೃಷ್ಟಿಯಿಂದ ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಈ ವರ್ಷದ ಆಹಾರ ಧಾನ್ಯದ ಬೆಳವಣಿಗೆಯು ಏರಿದ್ದರೂ ಸಹ ಈ ವರ್ಷ ಆ ರೀತಿಯ ತೊಂದರೆ ಬರುವುದಿಲ್ಲ ಎಂಬ ಒಂದು ಭಾವನೆಯನ್ನು ಯಾರಾದರೂ ಇಟ್ಟುಕೊಂಡು ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಆಹಾರ ಧಾನ್ಯ ಬೆಳೆದಿದೆ ಎಂದು ಅಂದುಕೊಂಡು ಇದ್ದಿದ್ದೇ ಆದರೆ ಕಳೆದ ವರ್ಷಕ್ಕಿಂತ ವಿಪರೀತ ಪರಿಸ್ಥಿತಿ ಆಹಾರದ ಸಂಬಂಧದಲ್ಲಿ ಬರುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಆ ದೃಷ್ಟಿಯಿಂದ ನಾವು ಕಳೆದ ಸಾರಿ ಯಾವ ಒಂದು ತೊಂದರೆಯನ್ನು ಪಟ್ಟಿದ್ದೇವೆ ಆ ತೊಂದರೆಯ ಅನುಭವದಿಂದ ಮುಂದೆ, ಎಂದರೆ, ಈ ವರ್ಷ ಯಾವ ತೊಂದರೆ ಬರಬಹುದು, ಅದನ್ನು ಯಾವ ರೀತಿ ಪರ್ಯಾಲೋಚನೆ ಮಾಡಬೇಕೆಂಬ ವಿಚಾರವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕಾದ್ದು ಅವರ ಕೆಲಸವಾಗಿದೆ. ಅವರು ಆಹಾರ ಧಾನ್ಯಗಳನ್ನು ಪ್ರೊಕ್ಯೂರ್ ಮಾಡುವುದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಸಹಕಾರ ಸಂಘಗಳಿಗೆ ಕೊಟ್ಟಿದ್ದಾರೆ ಎಂದು ಹೇಳುತ್ತಾ ಇದ್ದಾರೆ. ಈ ಸಹಕಾರ ಸಂಘಗಳು ಸರ್ಕಾರದ ಪರವಾಗಿ ಬರೀ ಈ ಒಂದು ಕೋಟಿ ರೂಪಾಯಿಗಳಲ್ಲಿ ಆಹಾರ ಧಾನ್ಯಗಳನ್ನು ಶೇಖರಿಸಲು ಸಾಧ್ಯವಿಲ್ಲ. ಇನ್ನೂ ಹೆಚ್ಚು ಶೇಖರಣೆ ಮಾಡಬೇಕಾದರೆ ಅಪೆಕ್ಸ್ ಬ್ಯಾಂಕ್‌ನಿಂದ ಆಗಲಿ ಅಥವಾ ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕ್‌ನಿಂದ ಆಗಲಿ ಹಣವನ್ನು ಬಡ್ಡಿಗಾಗಿ ತೆಗೆದುಕೊಳ್ಳಬೇಕು. ಈಗ ಬರೀ ಷೇರ್ ಕಾಂಟ್ರಿಬ್ಯೂಷನ್‌ಗಾಗಿ ಮಾತ್ರ ಕೊಟ್ಟಿದ್ದಾರೆ. ಸಹಕಾರ ಸಂಘಗಳು ಸರ್ಕಾರದ ಏಜೆಂಟರಾಗಿ, ಅವರ ಪರವಾಗಿ ಬತ್ತವನ್ನು ಅಥವಾ ಆಹಾರ ಧಾನ್ಯವನ್ನು ಖರೀದಿಗೆ ಕೊಳ್ಳುವಂತಹ ಸಮಯದಲ್ಲಿ ಆ ಹಣಕ್ಕೆ ಯಾವುದಾದರೂ ಬ್ಯಾಂಕಿಗೆ ಬಡ್ಡಿಯನ್ನು ಕೊಡಬೇಕಾಗಿ ಬಂದದ್ದೇ ಆದರೆ ಆ ಬಡ್ಡಿಯನ್ನು ಸರ್ಕಾರ ಕೊಡುತ್ತದೆಯೇ ಎಂಬ ಪ್ರಶ್ನೆಯನ್ನು ಆರ್ಥಿಕ ಸಚಿವರ ಮುಂದೆ ಇಡಬೇಕೆಂದು ಇಷ್ಟಪಡುತ್ತೇನೆ. ಏಕೆಂದರೆ ಅವರು ಖರೀದಿಮಾಡುವ ಭತ್ತದ ಒಂದು ಕಾಳನ್ನೂ ಸಹ ಸಹಕಾರ ಸಂಸ್ಥೆಗಳವರು ತಮ್ಮ ಇಷ್ಟಬಂದಹಾಗೆ ವಿಲೇ ಮಾಡುವುದಕ್ಕೆ ಸಾಧ್ಯವಿಲ್ಲ, ಸರಕಾರ ಅದನ್ನು ವಿಲೇಮಾಡುವುದಕ್ಕೆ ಯಾವರೀತಿ ಹುಕುಂ ಕೊಡುತ್ತಾರೋ ಅದೇರೀತಿ ಮಾಡುವುದರಿಂದ ಭತ್ತವನ್ನು ಅವರು ಸರಕಾರದ ಪರವಾಗಿ ಏಜೆಂಟರಾಗಿ ಕೊಳ್ಳುತ್ತಾರೆ. ಅದಕ್ಕೆ ಬಡ್ಡಿ ಕೊಡುವುದನ್ನು ಸರಕಾರ ಆ ಸಂಸ್ಥೆಗಳಿಗೆ ಕೊಡುವುದು ಉಚಿತವಲ್ಲವೇ ಎಂದು ಆಲೋಚಿಸಬೇಕಾಗಿದೆ. ಇಲ್ಲವಿದ್ದರೆ ಬಹುಶಃ ಈ ಬಡ್ಡಿಯನ್ನು ನಾವೇಕೆ ಕೊಡಬೇಕು. ಅದರಿಂದ ನಮಗೆ ದೊಡ್ಡ ಲಾಭ ಸಿಕ್ಕುವುದಿಲ್ಲ, ಆದುದರಿಂದ ಎಷ್ಟುಬೇಕೋ ಅಷ್ಟು ಆಹಾರ ಪದಾರ್ಥ ಶೇಖರಣೆ ಮಾಡೋಣ ಎಂಬ ಧೋರಣೆಯನು ಸಹಕಾರ ಸಂಸ್ಥೆಗಳು ತಾಳಿದರೆ ನಿಜವಾಗಿಯೂ ಸಹಕಾರ ಸಂಸ್ಥೆಗಳೇನು ಏಜೆಂಟರಾಗಿ ಶೇಖರಣೆ ಮಾಡಬೇಕೆಂಬ ಅಭಿಪ್ರಾಯವಿದೆ ಅದು ಸರಿಯಾಗಿ ಕಾರ್ಯರೂಪಕ್ಕೆ ಬರಲು ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ.

ಶೇಖರಣೆ ಮಾಡುವಾಗ ಭತ್ತದಬೆಲೆಗೂ ಮತ್ತು ಅಕ್ಕಿಯಬೆಲೆಗೂ ಇರುವ ಅಂತರ ನೋಡಿದ್ದೇ ಆದರೆ ಇವತ್ತು ನಾವು ರಾಜ್ಯದಲ್ಲಿ ಎಷ್ಟು ಭತ್ತ ಅಥವಾ ಅಕ್ಕಿ ಶೇಖರಿಸಬೇಕೆಂದಿದ್ದೇವೆ ಅದಕ್ಕೆ ಸಹಾಯಕವಾಗುವಂತಿಲ್ಲ. ಇವತ್ತು ಅನೇಕ ಕಡೆ ಸರಕಾರ ಎಷ್ಟು ಭತ್ತ ಶೇಖರಿಸಬೇಕೆಂದಿತ್ತೋ ಅದರಲ್ಲಿ ಮುಕ್ಕಾಲು ಪಾಲು ಕೂಡ ಶೇಖರವಾಗಿಲ್ಲ. ಭತ್ತದ ಹೋಲ್‌ಸೇಲ್ ಪ್ರೈಸಿಗೂ ಅಕ್ಕಿಯ ಹೋಲ್‌ಸೇಲ್ ಪ್ರೈಸಿಗೂ ವಿಪರೀತ ಅಂತರ ಆಗಿ ಅದರಿಂದ ವ್ಯಾಪಾರಸ್ಥರಿಗೆ ಮಾತ್ರ ಅನುಕೂಲವಾಗುತ್ತಿದೆ. ಭತ್ತವನ್ನು ಅಕ್ಕಿ ಮಾಡುವುದಕ್ಕೆ ಆಗುವ ಖರ್ಚನ್ನು ಕಳೆದರೂ ಸಹ ದೊಡ್ಡ ಅಂತರ ಇರುವುದು ವ್ಯಾಪಾರಿಗಳಿಗೆ ಹೋಗುತ್ತದೆ ಆದುದರಿಂದ ಭತ್ತ ಮತ್ತು ಅಕ್ಕಿಯ ಒಟ್ಟು ಮಾರಾಟದ ಬೆಲೆಯಲ್ಲಿರುವ ಅಂತರವನ್ನು ಸಾಧ್ಯವಾದಷ್ಟು ಕಡಮೆಮಾಡಬೇಕು. ಈಗಿರುವಂತೆಯೇ ಈ ಅಂತರವನ್ನು ಮುಂದುವರಿಸಿದರೆ ಖಾಸಗಿ ವ್ಯಾಪಾರಿಗಳಿಗೆ ಲಾಭ ಅತ್ಯಧಿಕವಾಗುವ ಸಂದರ್ಭ ಜಾಸ್ತಿಯಾಗುತ್ತದೆ. ಆಹಾರ ಧಾನ್ಯಗಳ ಬೆಲೆ ನಿಗದಿಮಾಡುವುದು ಮತ್ತು ಶೇಖರಣೆ ಕ್ರಮ ಈ ವರ್ಷ ಮಾತ್ರ ಇರುವುದಿಲ್ಲ, ಮುಂದಕ್ಕೂ ಕೆಲವು ವರ್ಷ ಮುಂದುವರೆಯುತ್ತದೆ. ಆ ದೃಷ್ಟಿಯಿಂದ ಅಂತರವಿರುವುದು ರೈತರಿಗೆ ದೊರೆಯಬೇಕು ಅಥವಾ ಆಹಾರ ಸಾಮಗ್ರಿಗಳನ್ನು ಕೊಂಡುತಿನ್ನುವವರಿಗೆ ದೊರೆಯಬೇಕು ವ್ಯಾಪಾರಿಗಳಿಗೆ ದೊರೆಯಬಾರದು. ಇದರಿಂದ ರೈತನಿಗೆ ಅಥವಾ ಕೊಂಡು ತಿನ್ನುವವರಿಗೆ ಬಹಳ ಸಹಾಯವಾಗುತ್ತದೆ ಎಂದು ತಿಳಿಯಬಾರದು. ಆ ದೃಷ್ಟಿಯಿಂದ ಅಂತರ ಕಡಮೆಮಾಡಬೇಕೆಂದು ಸೂಚಿಸುತ್ತೇನೆ.

ಇವತ್ತು ನಮ್ಮ ದೇಶದಲ್ಲಿ ಆಹಾರ ಸಾಮಗ್ರಿಗಳ ಬೆಳೆ ಸರಕಾರ ತಿಳಿಸಿರುವಂತೆ ಸಾಧಾರಣವಾಗಿ ಶೇಕಡ 1.4 ಕಡಮೆಯಾಗಿದೆ. ಇದೇಕೆ ಈಗಾಗುತ್ತಿದೆ ಎಂದು ನೋಡಿದರೆ ಕಮರ್ಷಿಯಲ್ ಕ್ರಾಪ್ಸ್ ಅವಶ್ಯಕತೆ ಹೆಚ್ಚಾಗುತ್ತಿದೆ, ಅದರಿಂದ ಹೆಚ್ಚು ಆದಾಯ ಸಹ ಬರುತ್ತಿದೆ. ಆದುದರಿಂದ ಏನು ಪರಿಣಾಮವಾಗಿದೆ ಎಂದರೆ ಆಹಾರ ಪದಾರ್ಥಗಳನ್ನು ಬೆಳೆಯುವುದು ಕಡಮೆಯಾಗುತ್ತಿದೆ. ಇವತ್ತು ಆರ್ಥಿಕ ಸಚಿವರು ತಮ್ಮ ಭಾಷಣದಲ್ಲಿ ಹೆಚ್ಚು ಆಹಾರ ಬೆಳೆಸಲು ಒಳ್ಳೆಯ ಬೀಜ, ಫರ್ಟಿಲೈಜರ್ಸ್ ಇಂಪ್ಲಿಮೆಂಟ್ಸ್ ಮುಂತಾದ್ದನ್ನೆಲ್ಲಾ ಕೊಡುತ್ತಿರುವುದಾಗಿ ಹೇಳಿದ್ದಾರೆ ಅದರ ಬದಲು ಬೆಳೆಯುವವರಿಗೆ ಸರಿಯಾದ ಬೆಲೆ ಸಿಕ್ಕುವಂತೆ ಮಾಡಿದ್ದರೆ ಚೆನ್ನಾಗಿತ್ತು. ರೈತರಿಗೆ ತಮ್ಮ ಬೆಳೆಗೆ ಸರಿಯಾದ ಬೆಲೆ ದೊರೆಯುತ್ತದೆ ಎಂಬ ಭಾವನೆ ಬಾರದಿದ್ದರೆ ನಿಜವಾಗಿಯೂ ಕೆಲವು ವರ್ಷಗಳಲ್ಲಿ ಆಹಾರ ಬೆಳೆಯುವ ಅನೇಕ ಜಮೀನುಗಳಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸುತ್ತಾರೆ. ಇದನ್ನು ತಪ್ಪಿಸಲು ಆಹಾರ ಬೆಳೆಯುವವರಿಗೆ ಉತ್ತೇಜನ ಸಿಕ್ಕುವಂತೆ ಮಾಡಿ ಉತ್ತಮವಾದ ಬೀಜ, ಫರ್ಟಿಲೈಜರ್ಸ್, ಇಂಪ್ಲಿಮೆಂಟ್ಸ್ ಸಹ ಕೊಡಬೇಕು. ಮೊದಲು ಆಹಾರ ಪದಾರ್ಥ ಬೆಳೆಯುವುದು ಲಾಭದಾಯಕವಾದ ಕಸುಬು ಎಂದು ತಿಳಿಯುವ ಹಾಗೆ ರೈತರ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸುವುದಕ್ಕೆ ಪ್ರಯತ್ನಪಟ್ಟರೆ ರೈತ ಆಹಾರ ಸಾಮಗ್ರಿ ಬೆಳೆಯುತ್ತಾನೆಯೇ ಹೊರತು ಇಲ್ಲದಿದ್ದರೆ ಕಮರ್ಷಿಯಲ್ ಕ್ರಾಪ್ಸ್ ಮಾತ್ರ ಬೆಳೆಯುತ್ತಾನೆ. ಆಹಾರಸಾಮಗ್ರಿ ಬೆಳೆಯುವವರಿಗೆ ದೇಶಪ್ರೇಮದಿಂದ ಅದನ್ನು ಬೆಳೆಯಿರಿ ಎಂದು ಹೇಳಿದರೆ ಕಾಫಿ, ಅಡಕೆ ಮುಂತಾದ ಬೆಳೆಗಳನ್ನು ಬೆಳೆಯುವವರು ಲಾಭಮಾಡಿಕೊಳ್ಳುತ್ತಿರುವಾಗ ಅದನ್ನು ನೋಡಿ ಅವರು ಸುಮ್ಮನಿರುವುದಿಲ್ಲ, ತಾವೂ ಲಾಭಕೊಡುವ ಬೆಳೆ ತೆಗೆಯಲು ಮನಸ್ಸುಮಾಡುವುದು ಸ್ವಾಭಾವಿಕ. ಆ ದೃಷ್ಟಿಯಿಂದ ಸರಕಾರ ಸರಿಯಾದ ಬೆಲೆ ನಿಗದಿಮಾಡಬೇಕು. ರೈತನ ಆರ್ಥಿಕ ಸ್ಥಿತಿ ಉತ್ತಮವಾಗುವಂತೆ ಸೂಕ್ತ ಕ್ರಮ ಕೈಕೊಳ್ಳಬೇಕು. ಆಹಾರದ ವಿಷಯದಲ್ಲಿ ಸಬ್‌ಸಿಡೈಸ್ ಮಾಡುವುದಕ್ಕೂ ಸಿದ್ಧವಾಗಿರಬೇಕು. ಸರಿಯಾದ ಕ್ರಮ ಕೊಡದೆ ಬೇರೆ ಯಾವ ರೀತಿಯಲ್ಲಿ ಉತ್ತೇಜನ ಕೊಟ್ಟರೂ ಆಹಾರ ಪದಾರ್ಥ ಬೆಳೆಯದೆ ಕಮರ್ಷಿಯಲ್ ಕ್ರಾಪ್ ಬೆಳೆಯಲುಹೋಗುತ್ತಾರೆ, ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ.

[Mr. DEPUTY SPEAKER in the chair]

ಅದೂ ಅಲ್ಲದೆ ಇವತ್ತು ಆಹಾರಪದಾರ್ಥಗಳ ಮೇಲೆ ಅಸಾಧಾರಣ ರೀತಿಯ ಹತೋಟಿ ಇದೆ. ಕಳೆದ ವರ್ಷದ ಹೋಲ್‌ಸೇಲ್ ಪ್ರೈಸಸ್ ಇಂಡೆಕ್ಸ್ ನೋಡಿದರೆ ಆಹಾರ ಸಾಮಗ್ರಿಗಳ ಬೆಲೆಗಳ ಏರಿಳಿತ ಎಷ್ಟರಮಟ್ಟಿಗಿದೆ, ಕೊಳ್ಳುವವರಿಗೆ ಎಷ್ಟು ಬೆಲೆ ಏರಿದೆ ಎಂಬುದು ಗೊತ್ತಾಗುತ್ತದೆ. ಈಗ ಕೊಳ್ಳುವವರಿಗೆ ನಿಗದಿಯಾದ ಬೆಲೆಯಲ್ಲಿ ಬೇಕಾದ ಪದಾರ್ಥಗಳು ಸಿಕ್ಕುವ ಹಾಗೆ ಸೂಕ್ತ ಕ್ರಮ ಕೈಗೊಳ್ಳಬೇಕು, ಜೀವನಾವಶ್ಯಕ ವಸ್ತುಗಳ ಬೆಲೆ ನಿಯಂತ್ರಣ ಮಾಡುವುದು ಅವಶ್ಯವಾಗಿದೆ. ಹಾಗಿಲ್ಲದೆ ರೈತ ಬೆಳೆಯುವ ಸಾಮಾನುಗಳಿಗೆ ಮಾತ್ರ ಬೆಲೆ ನಿಯಂತ್ರಣ ಮಾಡಿದರೆ ಇತರ ಪದಾರ್ಥಗಳ ಬೆಲೆ ಒಂದಕ್ಕೆ ಎರಡರಷ್ಟಾಗಿ ರೈತರ ಆರ್ಥಿಕಸ್ಥಿತಿ ಬಹಳ ಹಿಂದುಳಿಯುತ್ತದೆ. ಆದುದರಿಂದ ರೈತರು ಕೊಂಡು ಉಪಯೋಗಿಸುವ ಸಾಮಗ್ರಿಗಳಿಗೂ ನಿಯಂತ್ರಣವಿರಬೇಕು. ಹಾಗೆ ಮಾಡದಿದ್ದರೆ ನಿಜವಾಗಿಯೂ ನಾವು ಯಾವರೀತಿ ಆಹಾರ ಸಾಮಗ್ರಿಗಳನ್ನು ಬೆಳೆಸಬೇಕು,

(ಶ್ರೀ ಎ. ಟಿ. ಅಪ್ಪಣ್ಣ)

ಅವುಗಳ ಉತ್ಪತ್ತಿ ಹೆಚ್ಚುಮಾಡಬೇಕು ಎಂಬ ಅಭಿಪ್ರಾಯ ಇಟ್ಟುಕೊಂಡಿದ್ದೇವೆ ಅದು ಕಾರ್ಯ ರೂಪಕ್ಕೆ ಬರಲು ಸಾಧ್ಯವಿಲ್ಲ ಎಂದು ಸೂಚಿಸುತ್ತೇನೆ.

ಇವತ್ತು ನಾನ್ ಗೆಜೆಟೆಡ್ ನೌಕರರ ವಿಚಾರವಾಗಿ ಅನೇಕ ಮಾನ್ಯ ಸದಸ್ಯರು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮ್ಮಲ್ಲಿ ನಿಜವಾಗಿ ಹಣದ ಕೊರತೆ ಇದ್ದರೂ ಸಹ ನನಗೆ ತಿಳಿವಮಟ್ಟಿಗೆ ಈ ನಾನ್ ಗೆಜೆಟೆಡ್ ನೌಕರರ ಬೇಡಿಕೆ ಏನಿದೆ ಪೇ ಕಮಿಷನ್ ವ್ಯವಸ್ಥೆಮಾಡಬೇಕು ಎನ್ನುವುದು ಅದು ಸರಿಯಾಗಿದೆ. ಕೇರಳ ಸರ್ಕಾರದವರು ಈಗಾಗಲೇ ಒಂದು ಪೇ ಕಮಿಷನ್ ನೇಮಕ ಮಾಡಿದ್ದಾರೆ. ಅವರಿಗೆ ಏನು ಅಥಾರಿಟಿ ಕೊಟ್ಟಿದ್ದಾರೆಂದರೆ, ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ನಾನ್ ಗೆಜೆಟೆಡ್ ನೌಕರರಿಗೆ ಪರಿಹಾರ ಕೊಡುವ ಶಿಫಾರಸುಗಳನ್ನು ಮಾಡಬೇಕು ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ಈ ಸರ್ಕಾರವೂ ಸಹ ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಎಷ್ಟುಮಟ್ಟಿಗೆ ಈ ನಾನ್ ಗೆಜೆಟೆಡ್ ನೌಕರರಿಗೆ ಪರಿಹಾರವನ್ನು ಕೊಡಬಹುದು ಎನ್ನುವ ವಿಚಾರವಾಗಿ ಸರ್ಕಾರಕ್ಕೆ ಶಿಫಾರಸು ಮಾಡಲು ಒಂದೇ ಪೇ ಕಮಿಷನ್ ಏಕೆ ನೇಮಕ ಮಾಡಬಾರದು ? ಆ ರೀತಿಯ ಒಂದು ಪೇ ಕಮಿಷನ್ ಈ ಸರ್ಕಾರ ಮಾಡುವುದರಿಂದ ಅವರು ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಸಹ ಗಮನಕ್ಕೆ ತೆಗೆದುಕೊಂಡು ಯಾವ ರೀತಿಯ ರಿಯಾಯಿತಿಗಳನ್ನು ನಾನ್ ಗೆಜೆಟೆಡ್ ನೌಕರರಿಗೆ ಕೊಡಬಹುದು ಎಂದು ಸರ್ಕಾರಕ್ಕೆ ಶಿಫಾರಸು ಮಾಡುತ್ತದೆ. ಇದರಿಂದ ಈಗ ನೌಕರರಲ್ಲಿರುವ ಅಸಮಾಧಾನ, ಅತೃಪ್ತಿಯನ್ನು ನಿವಾರಣೆ ಮಾಡಿದಂತಾಗಿ ನಿಜವಾಗಿಯೂ ಅವರಿಗಿರುವ ತೊಂದರೆಯನ್ನು ಹೋಗಲಾಡಿಸುವ ಮನೋಭಾವವನ್ನು ಹೊಂದಿದವರಾಗಿದ್ದೇವೆ ಎಂದು ತೋರಿಸಲಿಕ್ಕೂ ಸಾಧ್ಯವಿದೆ. ಈ ದೃಷ್ಟಿಯಿಂದ ಈ ಸರ್ಕಾರ ಒಂದು ಪೇ ಕಮಿಷನ್ ರಚನೆ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇವೆ.

4-00 P. M.

ನಮ್ಮ ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಸೆಕೆಂಡರಿ ಎಜುಕೇಷನ್ ಬೋರ್ಡ್ ಸ್ಥಾಪನೆ ಮಾಡಲು ಒಂದು ವಿಧೇಯಕವನ್ನು ತರುವಂಥ ಅಭಿಪ್ರಾಯದಲ್ಲಿದ್ದೇವೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಅವರು ಹೇಳಿರುವಂಥ ರೀತಿಯಲ್ಲಿ ಆದಷ್ಟುಬೇಗ ವಿಧೇಯಕ ಈ ಸಭೆಯ ಮುಂದೆ ಬಂದು ಬೋರ್ಡು ಸ್ಥಾಪನೆಯಾಗಿ ಅಧಿಕವಾದ ಅಧಿಕಾರವನ್ನು ಅವರಿಗೆ ಕೊಡುವಂತಾಗಬೇಕು ಎಂದು ಹೇಳಲು ನಾನು ಇಚ್ಛೆಪಡುತ್ತೇನೆ. ಈಗ ಇರುವ ಸೆಕೆಂಡರಿ ಎಜುಕೇಷನ್ ಬೋರ್ಡಿಗೆ ಎಷ್ಟು ಅಧಿಕಾರವಿದೆಯೋ ಅದರಲ್ಲಿ ಅದಕ್ಕೆ ಸೆಕೆಂಡರಿ ಶಿಕ್ಷಣದ ಮೇಲೆ ಇರುವ ಹತೋಟಿಯಲ್ಲಿ ಆ ಶಿಕ್ಷಣದ ಮಟ್ಟ ಎಷ್ಟು ಇಳಿಯುತ್ತದೆ. ಅದನ್ನು ಸರಿಪಡಿಸುವುದಕ್ಕೆ ಈಗ ಇರುವ ಬೋರ್ಡಿಗೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಸೆಕೆಂಡರಿ ಎಜುಕೇಷನ್ ಬೋರ್ಡನ್ನು ಆದಷ್ಟು ಬೇಗ ರಚನೆ ಮಾಡಬೇಕು. ಇದಕ್ಕೆ ಸರಿಯಾದ ಕಾನೂನನ್ನು ತಂದು, ಬೋರ್ಡಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕು. ಹಾಗೆ ಮಾಡಿದ್ದೇ ಆದರೆ ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಯಾವ ಒಂದು ಶಿಕ್ಷಣದ ಮಟ್ಟ ಇಳಿದು ಹೋಗಿದೆ ಎನ್ನುವ ಭಾವನೆ ಇದೆಯೋ ಅದನ್ನು ನಿರ್ಮೂಲ ಮಾಡಿದಂತಾಗುತ್ತದೆ. ಶಿಕ್ಷಣದ ಮಟ್ಟ ಇನ್ನೂ ಇಳಿಯದಂತೆ ನೋಡಿಕೊಳ್ಳುವ ಕಾರ್ಯಕ್ರಮವನ್ನು ನಾವು ಕೈಕೊಳ್ಳಬೇಕು. ಎಷ್ಟು ಮಕ್ಕಳು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ, ಏಕೆ ಆಗುತ್ತಿದ್ದಾರೆ, ಇದಕ್ಕೆ ಕಾರಣವೇನು ಎನ್ನುವುದನ್ನು ತಿಳಿಯುವುದಕ್ಕೆ ಯಾವ ರೀತಿ ಎಫೆಕ್ಟಿವ್ ಕಂಟ್ರೋಲ್ ಮಾಡಬೇಕು ಎನ್ನುವ ಪ್ರಶ್ನೆಯನ್ನು ಆಲೋಚನೆ ಮಾಡುವುದಾದರೆ ಸೆಕೆಂಡರಿ ಎಜುಕೇಷನ್ ಬೋರ್ಡ್ ಅವಶ್ಯ ಮತ್ತು ಅದಕ್ಕೆ ಹೆಚ್ಚು ಅಧಿಕಾರಗಳನ್ನು ಕೊಡಬೇಕು ಎನ್ನುವುದು ಗೊತ್ತಾಗುತ್ತದೆ. ಸೆಕೆಂಡರಿ ಶಿಕ್ಷಣದ ಮಟ್ಟವನ್ನು ಏರಿಸಲಿಕ್ಕೆ ಅವಕಾಶ ಕಲ್ಪಿಸದೆ ಇದ್ದರೆ ಅದರ ಮಟ್ಟ ಇನ್ನೂ ಇಳಿದು ಹೋಗುತ್ತದೆ ಎನ್ನುವ ಶಂಕೆ ಇದೆ. ಆದ್ದರಿಂದ ಸರ್ಕಾರದವರು ಒಂದು ಕಾನೂನನ್ನು ತರಲು ಪ್ರಯತ್ನವನ್ನು ಆದಷ್ಟು ಬೇಗ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

"Under the Higher Secondary Scheme of Education XI Standard was opened for the first time in 50 Schools in different Parts of the State this year."

ಎಂದು ಅರ್ಥ ಮಂತ್ರಿಗಳು ಹೇಳಿದ್ದಾರೆ. ಇದು ನಮ್ಮ ದೇಶದಲ್ಲಿ ಒಂದು ವಿವಾದಾಸ್ಪದವಾದ ವಿಷಯವಾಗಿ ನಿಂತಿದೆ ಎಂದರೆ ತಪ್ಪಾಗಲಾರದು. ಹನ್ನೊಂದನೆಯ ಸ್ಟಾಂಡರ್ಡ್ ಕೊಡಗಿನಲ್ಲಿ ಕೆಲವು ವರ್ಷಗಳಿಂದ ಇದೆ. ಅಲ್ಲಿ ಬಹಳ ಪ್ರಯತ್ನ ನಡೆದು ಅನೇಕ ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ಪಾಸು ಮಾಡಿದ್ದಾರೆ. ಹಾಗೆ ಪಾಸ್ ಮಾಡಿದವರಿಗೆ ಏನಾಗಿದೆ ಎಂದರೆ ಐದಾರು ವರ್ಷಗಳಿಂದ ವ್ಯವಸಾಯ ಕಾಲೇಜು ಮುಂತಾದ ಕಾಲೇಜುಗಳಲ್ಲಿ ವ್ಯಾಸಂಗ ಮಾಡಲು ಅವಕಾಶ ಸಿಕ್ಕುತ್ತಿಲ್ಲ. ಹನ್ನೊಂದನೆಯ ಸ್ಟಾಂಡರ್ಡ್‌ನಲ್ಲಿ ವ್ಯವಸಾಯವನ್ನು ಒಂದು ವಿಷಯವಾಗಿ ತೆಗೆದುಕೊಂಡು ವ್ಯಾಸಂಗ ಮಾಡಿದವರಿಗೆ ವ್ಯವಸಾಯ ಕಾಲೇಜಿನಲ್ಲಿ ಸೀಟು ದೊರೆಯದಂಥ ಪರಿಸ್ಥಿತಿ ಬಂದಿದೆ. ಅದೂ ಅಲ್ಲದೆ ಇವತ್ತು ಹನ್ನೊಂದನೆಯ ಸ್ಟಾಂಡರ್ಡ್ ಓದಿದಂಥ ವಿದ್ಯಾರ್ಥಿಗಳಿಗೆ ಮದರಾಸು ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಸೀಟುಗಳು ಸಿಕ್ಕುವುದಿಲ್ಲ. ಇಲ್ಲಿ ವ್ಯಾಸಂಗ ಮಾಡಿ ಹನ್ನೊಂದನೆಯ ತರಗತಿಯಲ್ಲಿ ತೇರ್ಗಡೆಯನ್ನು ಹೊಂದಿ ಮದರಾಸಿನ ಕಾಲೇಜುಗಳಲ್ಲಿ ಅಥವಾ ಬೇರೆ ರಾಜ್ಯಗಳ ಕಾಲೇಜುಗಳಲ್ಲಿ ವ್ಯಾಸಂಗ ಮಾಡಬೇಕು ಎನ್ನುವ ವಿದ್ಯಾರ್ಥಿಗಳಿಗೆ ಅವಕಾಶ ದೊರೆಯದೆ ಇದ್ದರೆ ಏನು ಮಾಡಬೇಕು, ಆ ದೃಷ್ಟಿಯಿಂದ ಇವತ್ತು ನಮ್ಮ ಸುತ್ತಮುತ್ತಲಿನ ರಾಜ್ಯಗಳಲ್ಲಿ ಯಾವ ರೀತಿಯ ಪದ್ಧತಿ ಇದೆಯೋ? ಯಾವ ರೀತಿಯ ರಿಯಾಯಿತಿಗಳು ನಡೆಯುತ್ತಿವೆಯೋ ಅದೇ ರೀತಿಯಲ್ಲಿ ಹೋದರೆ ಮಾತ್ರ ನಮ್ಮ ವಿದ್ಯಾರ್ಥಿಗಳಿಗೆ ಪ್ರಯೋಜನ ಮಾಡಿದಂತಾಗುತ್ತದೆ. ಇಲ್ಲದೆ ಇದ್ದರೆ ಮದ್ರಾಸಿನಲ್ಲಿ ಪಿ. ಯು. ಸಿ ; ಕೇರಳದಲ್ಲಿ ಪಿ. ಯು. ಸಿ. ಮತ್ತು ಇಲ್ಲಿ ಹನ್ನೊಂದನೆಯ ಸ್ಟಾಂಡರ್ಡ್ ಇಟ್ಟುಕೊಂಡರೆ ನಮ್ಮ ವಿದ್ಯಾರ್ಥಿಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಿ ವಿದ್ಯಾಭ್ಯಾಸಮಾಡಲು ಅನುಕೂಲತೆ ಇರುವುದಿಲ್ಲ. ಆ ರೀತಿಯ ಅನುಕೂಲತೆ ಇಲ್ಲದ ಮೇಲೆ ನ್ಯಾಷನಲ್ ಇಂಟಿಗ್ರೇಷನ್ ಎಂದು ಏನು ಹೇಳುತ್ತೀರೋ ಅದು ಆಗಲು ಸಾಧ್ಯವಿಲ್ಲ. ಒಂದು ರಾಜ್ಯದಲ್ಲಿರತಕ್ಕ ವಿದ್ಯಾರ್ಥಿಗಳು ಇನ್ನೊಂದು ರಾಜ್ಯದಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶವಿರಬೇಕು. ಇದಕ್ಕೆ ಅಕ್ಕಪಕ್ಕದ ರಾಜ್ಯಗಳ ವಿದ್ಯಾಭ್ಯಾಸ ರೀತಿ ನೀತಿಗಳು ಒಂದೇ ಆಗಿರಬೇಕು. ಈ ದೃಷ್ಟಿಯಿಂದ ಮುಂದಕ್ಕೆ ಹನ್ನೊಂದನೆಯ ಸ್ಟಾಂಡರ್ಡ್ ಇಟ್ಟುಕೊಳ್ಳಬೇಕೋ ಅಥವಾ ಬಿಡಬೇಕೋ ಎನ್ನುವ ಪ್ರಶ್ನೆಯನ್ನು ಆಲೋಚನೆ ಮಾಡಿ ಅದನ್ನು ಹೆಚ್ಚು ಶಾಲೆಗಳಿಗೆ ವಿಸ್ತರಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಹಾಗಿಲ್ಲದೆ ಅದನ್ನು ಹೆಚ್ಚು ಶಾಲೆಗಳಿಗೆ ಮುಂದುವರಿಸುತ್ತ ಹೋಗುವ ಮನೋಭಾವವನ್ನು ಹೊತ್ತದ್ದೇ ಆದರೆ ಪಾನ ನಿರೋಧ ನೀತಿಯಿಂದ ಏನು ಕಷ್ಟನಷ್ಟಗಳು ಉಂಟಾಗಿವೆ ಅದೇ ಪರಿಸ್ಥಿತಿ ಇಲ್ಲಿಯೂ ಬಂದೀತು ಎಂದು ಹೇಳುತ್ತೇನೆ. ವಿದ್ಯಾಭ್ಯಾಸದಲ್ಲಿ 'ಟ್ರಯಲ್ ಅಂಡ್ ಎರರ್' ಎನ್ನುವ ಪ್ರಶ್ನೆ ಇಲ್ಲ. We are experimenting over human life. ಒಬ್ಬ ವಿದ್ಯಾರ್ಥಿಯ ವಿದ್ಯಾರ್ಜನೆಯ ಮಟ್ಟವನ್ನು ಇಳಿಸದೆ ಇದ್ದರೆ ಮುಂದಿನ ವಿದ್ಯಾಭ್ಯಾಸಕ್ಕೆ ತೊಡಕಾಗುವುದಿಲ್ಲ. ಆ ದೃಷ್ಟಿಯಿಂದ ಹನ್ನೊಂದನೆಯ ಸ್ಟಾಂಡರ್ಡ್‌ನ್ನು ಮುಂದಕ್ಕೂ ವಿಸ್ತರಿಸಿಕೊಂಡು ಹೋಗುವುದಕ್ಕಿಂತ ಅದನ್ನು ವಿಸ್ತರಿಸುವುದು ಸರಿಯೇ, ಆ ರೀತಿಯ ವಿದ್ಯಾಭ್ಯಾಸದಿಂದ ಅನುಕೂಲವೇ ಎನ್ನುವಂಥ ಪ್ರಶ್ನೆಯನ್ನು ಆಲೋಚನೆ ಮಾಡುವುದು ಒಳ್ಳೆಯದು. ಇದಕ್ಕೆ ವಿದ್ಯಾ ಖಾತೆಯವರು ತಜ್ಞರ ಒಂದು ಸಮಿತಿಯನ್ನು ಮಾಡಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಉಚಿತ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ತಾಂತ್ರಿಕ ಶಿಕ್ಷಣದ ವಿಚಾರವಾಗಿ ಮಾನ್ಯ ಅರ್ಥಿಕ ಸಚಿವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಕ್ರಾಫ್ಟ್ ಟ್ರೈನಿಂಗ್ ಪ್ರತಿ ವರ್ಷ ಮಾಡಬೇಕು ಎಂದು ಹೇಳಿದ್ದಾರೆ. ಇವತ್ತು ಆ ಕ್ರಾಫ್ಟ್ ಟ್ರೈನಿಂಗ್‌ನಲ್ಲಿ ಪಾಲಿಟೆಕ್ನಿಕ್‌ಗಳಿಂದ ಎಷ್ಟು ಜನ ವಿದ್ಯಾರ್ಥಿಗಳು ಪಾಸಾಗುತ್ತಿದ್ದಾರೆಯೋ ಅವರಿಗೆ ಸರಿಯಾದ ಕೆಲಸ ದೊರೆಯದೆ ಇರುವಂಥದ್ದನ್ನು ನಾವೆಲ್ಲ ನೋಡುತ್ತಿದ್ದೇವೆ. ಇವತ್ತು ಕೇಂದ್ರ ಸರ್ಕಾರದಿಂದ ಸ್ಥಾಪಿತವಾಗಿರತಕ್ಕ ಅನೇಕ ಕಾರ್ಖಾನೆಗಳಲ್ಲಿ ಈ ಪಾಲಿಟೆಕ್ನಿಕ್‌ನಲ್ಲಿ ಓದಿದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳದೆ ಅವರ ಶಾಲೆಯಲ್ಲಿ ಒಂದೂವರೆ ವರ್ಷ ಸ್ಟೈಪೆಂಡ್ ತೆಗೆದುಕೊಂಡು ಕೋರ್ಸ್ ತೆಗೆದುಕೊಳ್ಳತಕ್ಕ ಪರಿಸ್ಥಿತಿ ಇದೆ. ಆ ಒಂದು ದೃಷ್ಟಿಯಿಂದ ಇವತ್ತು ನಮ್ಮ ಸುತ್ತ ಮುತ್ತಲಿರುವ ಕೇಂದ್ರ ಸರ್ಕಾರದ ಕಾರ್ಖಾನೆಗಳ ಅವಶ್ಯಕತೆಗಳನ್ನು ನಾವು ಮನಸ್ಸಿನಲ್ಲಿಟ್ಟು ಕೊಂಡು ಕ್ರಾಫ್ಟ್ ಟ್ರೈನಿಂಗ್ ಕೊಟ್ಟರೆ ಪ್ರಯೋಜನವಾಗುತ್ತದೆ. B. E. L., H. M. T. ಮತ್ತು H. A. L. ಗಳಲ್ಲಾಗಲಿ ಸುಮ್ಮನೆ ಮೆಕಾನಿಕ್ಸ್ ಬೇರೆ ಬೇರೆ ಒಕೇಷನಲ್ ಟ್ರೈನಿಂಗ್ ಪಡೆದು ಹೋದರೆ ಒಡನೆಯೇ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆಂಬ ಭಾವನೆ ಸರಿ ಹೋಗುವುದಿಲ್ಲ. ನಮ್ಮ ರಾಜ್ಯದಲ್ಲಿರುವ ಕೇಂದ್ರದ ಕಾರ್ಖಾನೆಗಳಲ್ಲಿ ಯಾವ ರೀತಿ ಟ್ರೈನಿಂಗ್ ಕೊಟ್ಟರೆ ನೇರವಾಗಿ ಅಂತಹ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಕಳುಹಿಸಬಹುದು ಎಂಬುದನ್ನು ಸರ್ವೆಮಾಡಿ ವರ್ಷಂಪ್ರತಿ ಅಲ್ಲಿ ಎಷ್ಟು ಕೆಲಸಗಳು ಖಾಲಿ ಬೀಳುತ್ತವೋ ಅಂತಹ ಹುದ್ದೆಗಳ ಬಗ್ಗೆ ಪ್ರಯತ್ನಪಟ್ಟರೆ ಮಾತ್ರ ಅವರಿಗೆ ಒಂದು ಕಸುಬನ್ನು ಕಲಿಸಿದಂತಾಗುತ್ತದೆ. ಅಲ್ಲಿ ಹೋಗಿ 1½ ವರ್ಷ ಸ್ಟೈಪೆಂಡ್ ಪಡೆದು ಓದಬೇಕು, ಟ್ರೈನಿಂಗ್ ಪಡೆಯಬೇಕ.

(ಶ್ರೀ ಎ. ಪಿ. ಅಪ್ಪಣ್ಣ)

ಅದು ಬೇರೆ 1½ ವರ್ಷ ಹಾಳಾಗುತ್ತದೆ. ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಅವರು ಕಾರ್ಖಾನೆಗಳಿಗೆ ಸೇರುವುದಕ್ಕೆ ಮೊದಲೇ ಕ್ರಾಫ್ಟ್ ಟ್ರೈನಿಂಗ್ ಕೊಡುವುದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ್.—ಅಧ್ಯಕ್ಷರೇ, ಅರ್ಥಿಕ ಮಂತ್ರಿಗಳು 1965-66 ನೇ ವರ್ಷದ ಆಯವ್ಯಯಪತ್ರವನ್ನು ಈ ಸಭೆಯಲ್ಲಿ ಮಂಡಿಸಿದ್ದಾರೆ. ಈ ಪತ್ರವನ್ನು ಮಂಡಿಸಿದ ದಿನ ಹಾಗೂ ಸಮಯ ನೆಟ್ಟಗಿರಲಿಲ್ಲವೆನ್ನುವ ವಿಷಯ ನನಗೆ ತಿಳಿದು ಬರುತ್ತದೆ. ಒಂದೆಡೆ ಆಹಾರಾಭಾವ ಇನ್ನೊಂದೆಡೆ ಎಲ್. ಐ. ಸಿ ಗಳ ಗದ್ದಲ, ಮತ್ತೊಂದು ಮುಖ್ಯವಾದುದು ಇವತ್ತು ಸ್ವಲ್ಪ ಸಮಯದ ಹಿಂದೆ ಆಗಿರತಕ್ಕ ವಿಷಾದದ ಸಂಗತಿ, ಅವೆಲ್ಲವನ್ನೂ ನೋಡಿದರೆ ಇವರು ಏನೋ ಆಯವ್ಯಯಪಟ್ಟಿಯನ್ನು ಮಂಡಿಸಿದಾಗ ಸರಿಯಾದ ದಿನ ನೋಡಲಿಲ್ಲವೆಂಬುದಾಗಿ ನನಗೆ ತಿಳಿದು ಬರುತ್ತದೆ. ಈಗಾಗಲೇ ಎರಡು ವರ್ಷಗಳಿಂದಲೂ ನಾವು ಇವರು ಆಯವ್ಯಯ ಪತ್ರವನ್ನು ಮಂಡಿಸಿದ್ದು ನೋಡಿದ್ದರಲ್ಲಿ ಸಾಕಷ್ಟು ವಿಷಯಗಳನ್ನು ಸರಿಯಾದ ರೀತಿಯಲ್ಲಿ ಸಕಾರಣಗಳಿಂದ ತೋರಿಸುವಂಥ ಅಭಿಪ್ರಾಯ ಇವರಲ್ಲಿತ್ತು. ಇವತ್ತಿನ ದಿವಸದ 3 ನೇ ಆಯವ್ಯಯ ಪತ್ರವನ್ನು ಮಂಡಿಸಿರುವುದನ್ನು ನೋಡಿದಾಗ 4 ಕೋಟಿ ರೂಪಾಯಿಗಳ ಖೋತಾ ತೋರಿಸಿದ್ದು ಅಲ್ಲದೆ ಯೋಜನೆಗಳ ಬಗ್ಗೆ ಸರಿಯಾದ ರೀತಿಯಲ್ಲಿ ವಿಷದೀಕರಿಸದೆ ಇರುವುದನ್ನು ನಾವು ಇವತ್ತಿನ ದಿವಸ ನೋಡಬೇಕಾಗಿದೆ.

Sri B. D. JATTI.—If the Hon'ble Member reads the second part, he will find that I have given all the details regarding every scheme. He may look into the second part and if he points out any defects in it, I am prepared to reply.

ಶ್ರೀ ಸಿದ್ದಯ್ಯ ಕಾಶೀಮಠ್.—ಎರಡನೆ ಭಾಗವನ್ನು ಓದಿದರೂ ಕೆಲವು ವಿಚಾರಗಳನ್ನು ಈ ಸಂಭರ್ಧದಲ್ಲಿ ಎತ್ತಿ ತೋರಿಸಬೇಕಾಗಿದೆ. ಹಿಂದಿನ ಎರಡು ವರ್ಷಗಳ ಬಡ್ಜೆಟ್ಟನ್ನೂ ಹಾಗೂ ಇಂದಿನ ವರ್ಷದ ಬಡ್ಜೆಟ್ಟನ್ನೂ ನೋಡಿದಾಗ್ಗೆ ಕೆಲವು ವ್ಯತ್ಯಾಸಗಳು ಕಂಡುಬರುತ್ತಿರುವಾಗ ಅವನ್ನು ಇಲ್ಲಿ ನಿವೇದಿಸಬೇಕಾಗಿದೆ. ಸರ್ಕಾರದವರು ವ್ಯವಸಾಯದ ಬಗ್ಗೆ ಸಾಕಷ್ಟು ಯೋಜನೆಗಳನ್ನು ಮಾಡಿದ್ದಾರೆ. ಜನಸಂಖ್ಯೆ ಮಿತಿಮೀರಿ ಏರುತ್ತಿರುವಾಗ ಆದಷ್ಟು ಮಟ್ಟಿಗೆ ಆಹಾರದ ಬಗ್ಗೆ ಸ್ವಾವಲಂಬನೆಯಾಗಬೇಕೆಂಬ ದೃಷ್ಟಿಯಿಂದ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡು ಈ ವ್ಯವಸಾಯ ಖಾತೆಗೆ ಇವತ್ತು ವಿಶೇಷವಾಗಿ ಖರ್ಚುಮಾಡತಕ್ಕ ಒಂದು ಅಭಿಪ್ರಾಯವನ್ನು ಹೊಂದಿದೆ. ಆದರೆ ಪ್ರತಿಫಲ ಯಾವ ರೀತಿಯಾಗಿದೆ ಅಂದರೆ ಪ್ರತಿವರ್ಷವೂ ನಮ್ಮಲ್ಲಿ ಆಹಾರ ಉತ್ಪತ್ತಿ ಬಹಳ ಕಡಿಮೆಯಾಗುತ್ತಾ ಬಂದು ಆಹಾರವನ್ನು ಪರದೇಶಗಳಿಂದ ತರಿಸಿ ನಮ್ಮ ಕೊರತೆಯನ್ನು ನೀಗತಕ್ಕ ಪರಿಸ್ಥಿತಿ ನಮ್ಮ ರಾಜ್ಯಕ್ಕೆ ಈಗ ಉಂಟಾಗಿದೆ. ಆದ್ದರಿಂದ ವ್ಯವಸಾಯ ಖಾತೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಹಾಗೂ ಆಹಾರ ಮತ್ತು ವ್ಯವಸಾಯವನ್ನು ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಮಾಡುವುದಕ್ಕಾಗಿ ಇವರ ಬಡ್ಜೆಟ್ ಭಾಷಣದ ಎರಡನೆಯ ಭಾಗದಲ್ಲಿ 9 ಮಾರ್ಗಗಳನ್ನು ಕೊಟ್ಟಿದ್ದಾರೆ. ಅವು ಈ ರೀತಿ ಇವೆ :

1 Reclamation of land by tractors and bulldozers
2 Developing local manurial resources
3 Bringing more areas under irrigation
4 Use of chemical fertilisers
5 Use of improved seeds
6 Adoption of improved Agronomic Practices
7 Control of pests and diseases
8 Soil Conservation
9 Other measures

ಈ ಸಂಬಂಧದಲ್ಲಿ ನಾನು ಒಂದು ವಿಷಯವನ್ನು ಹೇಳುತ್ತೇನೆ. ವ್ಯವಸಾಯ ಖಾತೆಯಲ್ಲಿರತಕ್ಕ ಟ್ರಾಕ್ಟರ್ಸ್ ಮತ್ತು ಬುಲ್‌ಡೋಜರ್ಸ್ ಏನಾದುವು? ಭಾಷಣದಲ್ಲಿ ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಹೈರ್ ಪರ್ಚೇಜ್ ಸಿಸ್ಟಂ ಮೂಲಕ ವ್ಯವಸಾಯಗಾರರಿಗೆ ಟ್ರಾಕ್ಟರು ಗಳನ್ನು ಮತ್ತು ಬುಲ್‌ಡೋಜರುಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಮೂರನೆಯ

ಪಂಚವಾರ್ಷಿಕ ಯೋಜನೆಯಲ್ಲಿಯೂ ಕೆಲವನ್ನು ಮಾತ್ರ ಒದಗಿಸಿದ್ದಾರೆಂದು ಹೇಳಿದ್ದಾರೆ. ಸರಕಾರದಿಂದ ಒದಗಿಸಲಾಗಿದ್ದ ಟ್ರಾಕ್ಟರ್ಸ್ ಮತ್ತು ಬುಲ್‌ಡೋಜರುಗಳಿಂದ ಎಷ್ಟು ಭೂಮಿ ಸಾಗುವಳಿಯಾಗಿ ಆಹಾರೋತ್ಪತ್ತಿಯನ್ನು ಮಾಡಿದೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ಅರ್ಥಿಕ ಮಂತ್ರಿಗಳು ಉತ್ತರ ಕೊಡುವಾಗ ಜವಾಬು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಸರ್ಕಾರದವರು ಒದಗಿಸಿರತಕ್ಕ ಟ್ರಾಕ್ಟರ್ಸ್ ಹಾಗೂ ಬುಲ್‌ಡೋಜರ್ಸ್ ಸದುಪಯೋಗವಾಗುತ್ತಿವೆಯೇ ಎಂದು ನಾನು ಕೇಳಬೇಕಾಗಿದೆ. ಕೋ-ಅಪರೇಟೀವ್ ಸೊಸೈಟಿಗಳ ಮುಖಾಂತರ ಅರ್ಜಿಗಳು ಬಂದರೆ ಅವನ್ನು ವರ್ಗಾಯಿಸಿ ಕೊಡುತ್ತೇವೆಂದು ಹೇಳಿದ್ದಾರೆ. ರಾಜ್ಯದಲ್ಲಿರತಕ್ಕ ಟ್ರ್ಯಾಕ್ಟರುಗಳ ಸ್ಟೈಜ್ ಎಷ್ಟು? ಎಷ್ಟು ಟ್ರಾಕ್ಟರುಗಳನ್ನು ಇವತ್ತು ಸರ್ಕಾರದವರು ನಡೆಸುತ್ತಿದ್ದಾರೆ. ಇವತ್ತು ಗದಗ್‌ನಲ್ಲಿ ಒಂದು ಟ್ರಾಕ್ಟರ್ಸ್ ಸೊಸೈಟಿ ಎಂಬುದಾಗಿ ಇದೆ. ಅದರ ಸ್ಥಿತಿ ಯಾವ ರೀತಿ ಇದೆ ಯೆಂಬುದನ್ನು ಮಾನ್ಯ ಮಂತ್ರಿಗಳು ಉತ್ತರ ರೂಪದಲ್ಲಿ ತಿಳಿಸಬೇಕು. ಇವತ್ತು ಹೈರ್ ಪರ್ಚೇಜ್ ಸಿಸ್ಟಂನಲ್ಲಿ ಹೆಚ್ಚು ಜನರಿಗೆ ಹೆಚ್ಚು ಹೆಚ್ಚಾಗಿ ಟ್ರಾಕ್ಟರುಗಳನ್ನು ಹಾಗೂ ಬುಲ್‌ಡೋಜರುಗಳನ್ನು ಒದಗಿಸಬೇಕು. ಅಷ್ಟೇ ಅಲ್ಲದೆ ಸರ್ಕಾರದಲ್ಲಿರತಕ್ಕ ಹಳೆಯ ಟ್ರಾಕ್ಟರುಗಳನ್ನು ಮತ್ತು ಬುಲ್‌ಡೋಜರುಗಳನ್ನು ಹರಾಜು ಮೂಲಕ ಮಾರಬೇಕೆಂದು ನಾನು ಹೇಳುತ್ತೇನೆ. ಇನ್ನು ವ್ಯವಸಾಯ ಖಾತೆಯಲ್ಲಿರತಕ್ಕ ರಾಜಕೀಯದಿಂದ ಇವತ್ತಿನ ದಿವಸ ರಾಜ್ಯದಲ್ಲಿ ಹದಗೆಡತಕ್ಕ ಪರಿಸ್ಥಿತಿ ಬಂದಿದೆ ಎಂಬುದಾಗಿ ಸುಪ್ರೀಂ ಕೋರ್ಟಿನವರು ತೀರ್ಮಾನ ಮಾಡಿರುವುದಾಗಿದೆ. ಅದರಿಂದಾಗಿ ಯಾವ ಸೀಡ್ ಫಾರಮ್ಸ್ ಕೂಡ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ. ಪ್ರತಿಯೊಬ್ಬ ರೈತನಿಗೂ ಸರಿಯಾದ ಕಾಲದಲ್ಲಿ ಬೀಜಗಳನ್ನು ಒದಗಿಸಲು ಇವರು ಯಾವ ಪ್ರಯತ್ನವನ್ನೂ ಮಾಡಿಲ್ಲ. ಇಷ್ಟೇ ಅಲ್ಲದೆ ರೈತರು ತಾವಾಗಿಯೇ ಮುನ್ನುಗ್ಗಿ ಬಂದು ಫರ್ಟಿಲೈಜರ್ಸ್ ಬೇಕೆಂದು ಕೇಳಿದರೂ ಸಿಕ್ಕದೇ ಇರುವ ಪರಿಸ್ಥಿತಿ ನಮ್ಮಲ್ಲಿ ಎಷ್ಟೋ ಇದೆ. ನೀರಾವರಿ ಯೋಜನೆಗಳನ್ನು ಸಾಕಷ್ಟು ಮಾಡಿದ್ದಾರೆ. ಆದರೆ ಅನೇಕ ನೀರಾವರಿ ಯೋಜನೆಗಳ ಕೆಲಸಗಳು ಅರ್ಧಮರ್ಧವಾಗಿ ಉಳಿದು ಹೋಗಿವೆ. ಎಷ್ಟೋ ಕಡೆಗಳಲ್ಲಿ ಎರಡನೇ ಕಂತು ಹಣ ಸಹಾಯವನ್ನು ಕೊಡುವುದಕ್ಕಾಗಲಿಲ್ಲ. ಅದರಿಂದ ಕೆಲಸಗಳಾಗಿಲ್ಲ. ಇವತ್ತು ಏನಾದರೂ ಒಂದು ಕಡೆ ಬಾವಿ ತೆಗೆಸಬೇಕಾದರೆ ಅದಕ್ಕೆ ಪೂರ್ತಿಯಾಗಿ ಹಣಸಹಾಯ ಕೊಟ್ಟು ಇರ್ರಿಗೇಷನ್ ಮಾಡುವುದಕ್ಕೆ ಸಾಕಷ್ಟು ವ್ಯವಸ್ಥೆ ಮಾಡಬೇಕು. ಆ ರೀತಿಯಾಗಿ ಈ ಸರ್ಕಾರದವರು ಮಾಡುತ್ತಲೇ ಇಲ್ಲ. ಇವತ್ತಿನ ದಿವಸ ಇವರು ಅಂಕಿ ಸಂಖ್ಯೆಗಳನ್ನು ತೋರಿಸುತ್ತಾ ಇಷ್ಟು ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ, ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಿದ್ದೇವೆಂದು ಹೇಳಿದರೆ ಅರ್ಥವಿಲ್ಲ. ಇವತ್ತಿನ ದಿವಸ ಇವರು ಅನೇಕ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಿದ್ದಾರೆ. ಭದ್ರಾ ಜಲಾಶಯಕ್ಕಾಗಿ 31 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಹಾಸ್ಪೆಟ್ ಹತ್ತಿರ ತುಂಗಭದ್ರಾ ಡ್ಯಾಮನ್ನು ಕಟ್ಟಿದ್ದರೂ ನೀರನ್ನು ಸರಿಯಾದ ರೀತಿಯಲ್ಲಿ ಒದಗಿಸಿ ರೈತರಿಗೆ ಸಾಗುವಳಿ ಮಾಡುವುದಕ್ಕೆ ಏನೇನು ಅನುಕೂಲಗಳನ್ನು ಮಾಡಿದ್ದಾರೋ ಅದು ಬಹಳ ಚೆನ್ನಾಗಿದೆಯೆ? ಅದರಿಂದಲೇ ಇವತ್ತು ಭದ್ರಾ ಡ್ಯಾಂ ನೀರು ಸ್ಟ್ಯಾಗ್‌ನೇಟಾಗಿ ಉಳಿದಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಅದೇಕೋ ಇವರ ಶಕ್ತಿ ಕುಗ್ಗಿಹೋಗಿದೆ. ಅಲ್ಲಿ ಸಾಗುವಳಿ ಮಾಡುವುದಕ್ಕೆ ಬೇಕಾದ ಖರ್ಚನ್ನು ನೀಗಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೇನಾದರೂ ಇವರು ಪ್ರಯತ್ನ ಮಾಡಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಅದನ್ನು ಜಾಗ್ರತೆ ಮಾಡಿದರೆ ಹೆಚ್ಚು ಪ್ರಮಾಣದಲ್ಲಿ ಆಹಾರ ಬೆಳೆಯುವುದಕ್ಕೆ ಸಾಧಕವಾಗುತ್ತದೆ. ಈ ವರ್ಷ 125 ಕೋಟಿ ರೂಪಾಯಿಗಳನ್ನು ಇವರು ವ್ಯವಸಾಯ ಖಾತೆಗೆ ರಿಜರ್ವ್ ಆಗಿಟ್ಟಿದ್ದಾರೆ. ಆದ್ದರಿಂದ ರೈತನಿಗೆ ಬೇಕಾದ ಸೌಕರ್ಯಗಳೆಲ್ಲವನ್ನೂ ಒದಗಿಸಿದರೆ ಅವರು ನೀರನ್ನು ಹೆಚ್ಚು ಉಪಯೋಗಿಸಿ ಹೆಚ್ಚು ಹೆಚ್ಚಿಗೆ ಬೆಳೆಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನ ದಿವಸ ಸುಪ್ರೀಂ ಕೋರ್ಟಿನವರು ಹೇಳಿದ ಹಾಗೆ ಇದರಲ್ಲಿರತಕ್ಕ ರಾಜಕೀಯವನ್ನೆಲ್ಲಾ ಕಿತ್ತೊಗೆದರೆ ಈಗ್ಗೆ 6 ತಿಂಗಳುಗಳಿಂದ ಆಗಿದ್ದಂಥ, ಅದರಲ್ಲೂ ಈ ವ್ಯವಸಾಯ ಖಾತೆಯೊಳಗಿರತಕ್ಕಂಥ ಕಶ್ಮಲಗಳನ್ನು ಕಳಚುವುದರ ಮೂಲಕ ಮುಂದೆ ರೈತನಿಗೆ ಉಪಯೋಗವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಆ ಹಣವನ್ನು ಸಕಾಲದಲ್ಲಿ ರೈತರಿಗೆ ಕೊಡದೆ ಬೇರೆ ಯಾವಾಗಲೋ ಕೊಟ್ಟರೆ ಅದರ ಪರಿಣಾಮ ಏನಾಗುತ್ತದೆ ಎಂದರೆ, ಅವರು ಕೊಡತಕ್ಕ ಹಣ ಬೇರೆ ಯಾವುದೋ ಕೆಲಸಕ್ಕೆ ಹೋಗತಕ್ಕಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ನಿಗಾ ವಹಿಸಬೇಕು. ರೈತರಿಗೆ ಸರ್ಕಾರದವರು ಏನು ಸಹಾಯವನ್ನು ಮಾಡುತ್ತಾರೆಯೋ ಅದು ಉಪಯೋಗವಾಗುವಂತೆ ಮಾಡಬೇಕು. ಬ್ಲಾಕ್ ಡೆವಲಪ್‌ಮೆಂಟ್ ಆಫೀಸಿನಲ್ಲಿ ಯೋಜನೆಯ ಪ್ರಕಾರ ರೈತನಿಗೆ ಕೊಡತಕ್ಕಂಥ ಹಣ ಸರಿಯಾದ ರೀತಿಯಲ್ಲಿ ಸಂದಾಯವಾಗಬೇಕು. ಸರ್ಕಾರದವರು ಇವೊತ್ತಿನ ದಿವಸ ರೈತನಿಗೆ ಸಹಾಯ ಮಾಡತಕ್ಕಂಥ ಹಣ ಒಂದು ತಾಲ್ಲೂಕಿನಲ್ಲಿ ಯಾರಿಗೋ ಒಂದೆರಡು ಜನಗಳಿಗೆ ಸಿಕ್ಕಿದರೆ

ಅದು ಸಾಫಲ್ಯವಾಗುವುದಿಲ್ಲ. ಅದು ರೈತರಿಗೆ ಎಲ್ಲರಿಗೂ ಸಿಕ್ಕುವಂತಾಗಬೇಕು. ರೈತನಿಗೆ ಬೇಕಾದಷ್ಟು ಸೌಕರ್ಯಗಳನ್ನು ಕೊಟ್ಟಿದ್ದೇವೆ ಎಂದು ಮಾನ್ಯ ಹಣಕಾಸಿನ ಸಚಿವರ ಭಾಷಣದಲ್ಲಿ ಹೇಳಿದ್ದಾರೆ. ರೈತರಿಗೆ ಯಾವ ಯಾವ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದಾರೆಂದು ನಾನು ಕೇಳುತ್ತೇನೆ. ದಿನ ಬೆಳಗಾದರೆ ರೈತ ತನ್ನ ಕೆಲಸಕ್ಕೋಸ್ಕರ ಸರ್ಕಾರಿ ಕಛೇರಿಗೆ ತಿರುಗಬೇಕು. ರೈತನಿಗೆ ಸಂಬಂಧಪಟ್ಟ ಉಪಕರಣಗಳು ಬಿಸಿಲಲ್ಲಿ ಮಳೆಯಲ್ಲಿ ಬಿದ್ದಿರುತ್ತವೆ. ಅವುಗಳನ್ನು ಜೋಪಾನವಾಗಿಡಲು ಬೇಕಾದಂತಹ ತಗಡು, ಸಿಮೆಂಟ್, ವಗೈರೆ ಸಾಮಾನುಗಳನ್ನು ಸರ್ಕಾರದವರು ಕೊಡದೆ ಇರತಕ್ಕಂಥ ಒಂದು ಪರಿಸ್ಥಿತಿ ಇದೆ. ಕಾಂಗ್ರೆಸ್ ಎಗ್ಸಿಬಿಷನ್ನಿಗೆ ಬೇಕಾದರೆ ಸಾವಿರಾರು ತಗಡುಗಳನ್ನು ಕೊಡುತ್ತಾರೆ. ಆದರೆ ರೈತನಿಗೆ ಬೇಕಾಗಿರತಕ್ಕ 5-6 ತಗಡುಗಳನ್ನು ಕೊಡತಕ್ಕ ಪರಿಸ್ಥಿತಿ ಸರ್ಕಾರಕ್ಕೆ ಇಲ್ಲ. ಆ ಎಗ್ಸಿಬಿಷನ್ನಿಗೆ ಕೊಟ್ಟಿರತಕ್ಕ ತಗಡುಗಳನ್ನು ಆಕ್ಷನ್ ಮಾಡುವಾಗ ಅವುಗಳನ್ನು ರೈತರಿಗೆ ಕೊಡದೆ ಯಾರಿಗೋ ತಮಗೆ ಬೇಕಾದವರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಎಗ್ಸಿಬಿಷನ್ನಿಗೆ ಕೊಟ್ಟ ತಗಡುಗಳನ್ನು ಆಕ್ಷನ್ ಮಾಡುವುದಿಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ್.—ಆ ರೀತಿ ಆಕ್ಷನ್ ಮಾಡಿದ್ದಾರೆ. ಅದಕ್ಕೋಸ್ಕರವೇ ನಾನು ಹೇಳುತ್ತಿರುವುದು. ಈಗ ಸುಮಾರು ಎರಡು-ಮೂರು ವರ್ಷಗಳಿಂದಲೂ ನಮ್ಮ ಜಿಲ್ಲೆಗೆ ಹೆಚ್ಚಿನ ತಗಡುಗಳು ಬರುತ್ತಾ ಇಲ್ಲ. ರೈತನಿಗೆ ಕೇವಲ 2 ಮೂಟೆ, 3 ಮೂಟೆ ಅಥವಾ 5 ಮೂಟೆ ಸಿಮೆಂಟ್ ಮಾತ್ರ ಬೇಕಾಗುತ್ತದೆ, ಅದೂ ಕೂಡ ಸರಿಯಾಗಿ ರೈತನಿಗೆ ಸಿಕ್ಕುತ್ತಿಲ್ಲ. ಆದ್ದರಿಂದ ಅಂಥಾದ್ದನ್ನು ಸರ್ಕಾರದವರು ರೈತನಿಗೆ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ನಮ್ಮ ದೇಶದಲ್ಲಿ ರೆವಿನ್ಯೂನಿಂದ 127 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಈಗಾಗಲೇ ಹೊಸದಾಗಿ ಲ್ಯಾಂಡ್ ರೆವಿನ್ಯೂ ಅನ್ನು ಹೆಚ್ಚುಮಾಡುವುದಕ್ಕೆ ಸೆಟ್ಲ್‌ಮೆಂಟ್ ವರದಿಯನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಈಗ ಈ ನಮ್ಮ ದೇಶದಲ್ಲಿ 127 ಕೋಟಿ ರೂಪಾಯಿಗಳ ಉತ್ಪತ್ತಿ ಇರುವಾಗ 3½ ಕೋಟಿ ರೂಪಾಯಿಗಳ ಕಂದಾಯವನ್ನು ರೈತನಿಗೇ ಬಿಟ್ಟರೆ ಸರ್ಕಾರಕ್ಕೇನೂ ಅದರಿಂದ ನಷ್ಟವಾಗುವುದಿಲ್ಲ. ಆದ್ದರಿಂದ ರೈತನಿಗೆ ಕಂದಾಯವನ್ನು ಮಾಫಿ ಮಾಡಬೇಕು.

ಶ್ರೀ ಬಿ. ಡಿ. ಜತ್ತಿ.—3½ ಕೋಟಿ ರೂಪಾಯಿಗಳ ಉತ್ಪತ್ತಿ ಬರತಕ್ಕ ಬೇರೆ ಯಾವುದಾದರೂ ಒಂದು ಸಲಹೆಯನ್ನು ಮಾನ್ಯ ಸದಸ್ಯರು ಮಾಡಬೇಕು.

ಶ್ರೀ ಕೆ. ಲಕ್ಕಪ್ಪ.—10 ಜನ ಮಂತ್ರಿಗಳನ್ನು ತೆಗೆದರೆ ಅದರಿಂದ ಬೇಕಾದಷ್ಟು ಹಣ ಉಳಿತಾಯವಾಗುತ್ತದೆ. ಪ್ರೊಹಿಬಿಷನ್ ಅನ್ನು ತೆಗೆದರೆ ಅದರಿಂದ ಬೇಕಾದಷ್ಟು ಹಣ ಬರುತ್ತದೆ.

ಶ್ರೀ ಬಿ. ಡಿ. ಜತ್ತಿ.—10 ಜನ ಮಂತ್ರಿಗಳನ್ನು ತೆಗೆದರೆ ಅದರಿಂದ 3½ ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆಯೇ ಎಂಬುದನ್ನು ಮಾನ್ಯ ಸದಸ್ಯರು ಸ್ವಲ್ಪ ಸರಿಯಾಗಿ ಲೆಕ್ಕಹಾಕಿ ನೋಡಬೇಕು.

ಶ್ರೀ ಕೆ. ಲಕ್ಕಪ್ಪ.—10 ಜನ ಮಂತ್ರಿಗಳನ್ನು ತೆಗೆದರೆ ಅಷ್ಟು ಹಣ ಉಳಿತಾಯವಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಈಗ ನಾನು ಹೇಳುವುದು ಇಷ್ಟೆ. ಈಗ ಸರ್ಕಾರದವರು ಹೊಸದಾಗಿ ರೈತರಿಗೆ ಏನು ಕಂದಾಯವನ್ನು ಹಾಕಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆಯೋ ಅದನ್ನು ಹಾಕದೆ ಬಿಟ್ಟುಬಿಡುವುದರಿಂದ ತಪ್ಪೇನೂ ಆಗಲಾರದು. ಅದು ನಮ್ಮ ದೇಶದ ಆದಾಯದಲ್ಲಿ ಬಹಳ ಕಡಿಮೆ ಪರ್ಸೆಂಟ್ ಆಗುತ್ತದೆ. ಆದ್ದರಿಂದ ಹೊಸದಾಗಿ ಹಾಕತಕ್ಕಂಥ ಕಂದಾಯವನ್ನು ಬಿಟ್ಟುಬಿಡಬೇಕು. ಬೇರೆ ರೀತಿಯಿಂದ ಆ ಹಣವನ್ನು ಪಡೆಯಬೇಕು ಮತ್ತು ರೈತನಿಗೆ ಪ್ರೋತ್ಸಾಹ ಕೊಟ್ಟು ಹೆಚ್ಚಿನ ಆಹಾರವನ್ನು ಬೆಳೆಯುವ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ. ಮೇಲಿಂದ ಮೇಲೆ ಆ ವಿಚಾರದಲ್ಲಿ ಹೇಳಿದರೂ ಕೂಡ ಆ ಬಗ್ಗೆ ಸರ್ಕಾರದವರು ಸರಿಯಾಗಿ ಗಮನ ಕೊಟ್ಟಿಲ್ಲ. ಮಧ್ಯಾಹ್ನದ ಉಪಹಾರದ ಬಗ್ಗೆ ನಾವು ಸರ್ಕಾರದವರಿಗೆ ಸಾಕಷ್ಟು ಹೇಳುತ್ತಾ ಬಂದಿದ್ದೇವೆ. ಇವೊತ್ತಿನ ಈ ನಮ್ಮ ರಾಜ್ಯದಲ್ಲಿ ಸುಮಾರು 8 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಉಪಹಾರವನ್ನು ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ. ಇದು ಯಾವ ಕಡೆ ಸರಿಯಾಗಿ ನಡೆದಿದೆ ಎಂಬುದನ್ನು ಪ್ರತ್ಯಕ್ಷವಾಗಿ ಏನಾದರೂ ಯಾರಾದರೂ ತಾವು ನೋಡಿದ್ದೀರಾ ಎಂದು ನಾನು ಕೇಳುತ್ತೇನೆ. ಈಗ ನಾನು ತಮಗೆ ಉದಾಹರಣೆಗೆ ಧಾರವಾಡ ಜಿಲ್ಲೆಯ ವಿಚಾರವನ್ನೇ ಹೇಳುವುದಾದರೆ ಸ್ಕೂಲುಗಳಲ್ಲಿ ಈ ಮಧ್ಯಾಹ್ನದ ಉಪಹಾರವನ್ನು ತಯಾರು ಮಾಡತಕ್ಕ ರೂಮಿನಲ್ಲಿ ರವೆ, ಡಾಲ್ಡಾ, ಹಾಲಿನ ಪುಡಿ ಮುಂತಾದ ಮಧ್ಯಾಹ್ನದ ಉಪಹಾರವನ್ನು

ತಯಾರು ಮಾಡುವುದಕ್ಕೆ ಬೇಕಾದಂತಹ ಸಾಮಗ್ರಿಗಳನ್ನು ಎಷ್ಟರಮಟ್ಟಿಗೆ ಸಂಗ್ರಹ ಮಾಡಿದ್ದಾರೆಂಬುದನ್ನು ತಿಳಿದುಕೊಳ್ಳಬೇಕು. ನಿಜವಾಗಿಯೂ ಸಹ ಸರ್ಕಾರಕ್ಕೆ ಇದರಿಂದ ಹೆಚ್ಚಿನ ಖರ್ಚು ಬರುತ್ತಿದೆ. ಆದ್ದರಿಂದ ಇದನ್ನು ನಿಲ್ಲಿಸಿ ಎಂದು ನಾವು ಮೇಲಿಂದ ಮೇಲೆ ಹೇಳತಕ್ಕಂಥ ಒಂದು ಪರಿಸ್ಥಿತಿ ಬಂದಿದೆ. ಈ ವಿಷಯದಲ್ಲಿ ನನ್ನ ಒಂದು ಅನುಭವವನ್ನು ಹೇಳುವುದಾದರೆ, ಸ್ಕೂಲುಗಳಲ್ಲಿ ಈ ಮಧ್ಯಾಹ್ನದ ಉಪಹಾರವನ್ನು ತಯಾರು ಮಾಡಬೇಕಾದರೆ ಉಪಾಧ್ಯಾಯರಿಗೆ ಇದೇ ಒಂದು ಪೂರ್ತಿ ದಿವಸವೇ ಬೇಕಾಗುತ್ತದೆ. ಅದೂ ಅಲ್ಲದೆ ಇವರು ಕೊಡತಕ್ಕ ಉಪಹಾರದಲ್ಲಿ ಮಕ್ಕಳಿಗೆ ಹೊಟ್ಟೆ ತುಂಬುವುದಿಲ್ಲ. ಕೆಲವರು ನಮಗೆ ಪುಕ್ಕಟ್ಟೆಯಾಗಿ ಕೊಡತಕ್ಕ ಸಾಮಗ್ರಿಗಳನ್ನು ನಾವು ಸದುಪಯೋಗ ಮಾಡುತ್ತೇವೆಂದರೆ ಅದು ಆಗುವುದಿಲ್ಲ. ಆದ್ದರಿಂದ ಈ ಮಧ್ಯಾಹ್ನದ ಉಪಹಾರವನ್ನು ಕೊಡತಕ್ಕ ಒಂದು ಪದ್ಧತಿ ಏನಿದೆ ಇದನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಪ್ರೊಹಿಬಿಷನ್ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. 1962ನೇ ಇಸವಿಯಲ್ಲಿ ಮೊಟ್ಟಮೊದಲನೆಯದಾಗಿ ಈ ವಿಷಯದಲ್ಲಿ ಪ್ರಶ್ನೆಯನ್ನು ಕೇಳಿದಾಗ ಪ್ರತಿ ವರ್ಷವೂ ಪ್ರತಿಯೊಂದು ಜಿಲ್ಲೆಯಲ್ಲಿಯೂ ಈ ಪಾನ ನಿರೋಧ ಕಾನೂನನ್ನು ಜಾರಿಗೆ ತರುತ್ತೇವೆ ಎಂದು ಹೇಳಿದ್ದರು. ಆದರೂ ಸಹ ಪಾನ ನಿರೋಧವನ್ನು ಸಂಪೂರ್ಣವಾಗಿ ದೇಶಾದ್ಯಂತ ಜಾರಿಗೆ ತಂದಿಲ್ಲ. ಬೆಂಗಳೂರು, ಗುಲ್ಬರ್ಗ ಮತ್ತು ರಾಯಚೂರು ಈ ಮೂರು ಜಿಲ್ಲೆಗಳಲ್ಲಿ ಇನ್ನೂ ಪಾನ ನಿರೋಧವನ್ನು ಜಾರಿಗೆ ತಂದಿಲ್ಲ. ಕಾರಣವೇನೆಂದರೆ, ಇದಕ್ಕೆ ರಾಜಕೀಯದ ಪ್ರೆಷರ್ ಬಂದಿದೆ. ಮಂಡ್ಯಾ ಜಿಲ್ಲೆಯಲ್ಲಿ ಪೂರ್ತಿಯಾಗಿ ಪಾನ ನಿರೋಧವನ್ನು ಜಾರಿಗೆ ತಂದಿದ್ದೇವೆಂದು ಹೇಳುತ್ತಾರೆ. ಆದರೆ ಅಲ್ಲಿ ಲಿಕ್ಕರ್ ತಯಾರು ಮಾಡತಕ್ಕ ಫ್ಯಾಕ್ಟರಿ ಇದೆ. ಹಾಗಾದರೆ ಅಲ್ಲಿನ ಜನಗಳು ಕುಡಿಯದೆ ಹಾಗೆಯೇ ಇರುತ್ತಾರೆಯೇ ? ಬಳ್ಳಾರಿಯ ಜಿಲ್ಲೆಯಲ್ಲಿ ಈಚಲಮರದಿಂದ ಹೆಂಡವನ್ನು ತೆಗೆದು ಬೇರೆ ಕಡೆಗೆ ಸಾಗಿಸುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ಪಾನ ನಿರೋಧವನ್ನು ದೇಶಾದ್ಯಂತ ಸಂಪೂರ್ಣವಾಗಿ ಜಾರಿಗೆ ತರಬೇಕು. ಇಲ್ಲದಿದ್ದರೆ ಸಂಪೂರ್ಣವಾಗಿ ಎಲ್ಲಾ ಕಡೆಯೂ ಪಾನ ನಿರೋಧವನ್ನು ತೆಗೆಯಬೇಕು, ಎಂದು ನಾನು ಹೇಳುತ್ತೇನೆ.

ಇನ್ನು ರಿಮ್ಯಾಂಡ್ ಹೋಮ್‌ಗಳ ಬಗ್ಗೆ ಹೇಳುವುದಾದರೆ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ರಿಮ್ಯಾಂಡ್ ಹೋಮ್ ಇದೆ. ಅ ನೀತಿ ಮಾರ್ಗದಲ್ಲಿ ಹೋಗತಕ್ಕಂಥ ಹುಡುಗರನ್ನು ಹಿಡಿದು ಅವರನ್ನು ಸನ್ಮಾರ್ಗಕ್ಕೆ ಹಚ್ಚುವುದಕ್ಕೆ ನಮ್ಮ ರಾಜ್ಯದಲ್ಲಿ ಸುಮಾರು 19 ರಿಮ್ಯಾಂಡ್ ಹೋಮ್‌ಗಳನ್ನು ಮಾಡಿದ್ದಾರೆ. ಈ 19 ರಿಮ್ಯಾಂಡ್ ಹೋಮ್‌ಗಳ ಪೈಕಿ 13 ರಿಮ್ಯಾಂಡ್ ಹೋಮ್‌ಗಳನ್ನು ಸರ್ಕಾರದವರು ನಡೆಸುತ್ತಿದ್ದಾರೆ. ಇನ್ನು ಬಾಕಿ ಉಳಿದಿರುವ 6 ರಿಮ್ಯಾಂಡ್ ಹೋಮ್‌ಗಳನ್ನು ವಾಲೆಂಟರಿ ಏಜೆನ್ಸಿಗಳು ನಡೆಸುತ್ತಿವೆ. ಈ ವಾಲೆಂಟರಿ ಏಜೆನ್ಸಿಗಳು ನಡೆಸುತ್ತಿರುವ ರಿಮ್ಯಾಂಡ್ ಹೋಮ್‌ಗಳ ಸ್ಥಿತಿ ಚಿಂತಾಜನಕವಾಗಿದೆ. ಅವು ಸರಿಯಾಗಿ ನಡೆಯುತ್ತಿಲ್ಲ, ಅಲ್ಲಿರತಕ್ಕ ಮಕ್ಕಳನ್ನು ನೋಡಿದರೆ ಹೊಟ್ಟೆಗೆ ಸರಿಯಾಗಿ ಅನ್ನವಿಲ್ಲ, ಮೈಗೆ ಬಟ್ಟೆಯಿಲ್ಲ, ಸರಿಯಾದ ಹಾಸಿಗೆ ಹೊದಿಕೆಗಳಿಲ್ಲ. ಇಂಥಾ ಒಂದು ಪರಿಸ್ಥಿತಿಯಲ್ಲಿ ಆ ರಿಮ್ಯಾಂಡ್ ಹೋಮ್‌ಗಳಲ್ಲಿರತಕ್ಕ ಮಕ್ಕಳು ಇದ್ದಾರೆ. ಆದ್ದರಿಂದ ಅ ನೀತಿ ಮಾರ್ಗದಲ್ಲಿ ಹೋಗತಕ್ಕಂಥ ಮಕ್ಕಳನ್ನು ಹಿಡಿದು ಸನ್ಮಾರ್ಗದಲ್ಲಿ ಹಚ್ಚುವುದಕ್ಕೋಸ್ಕರ ವಾಲೆಂಟರಿ ಏಜೆನ್ಸಿಗಳು ಯಾವ ರಿಮ್ಯಾಂಡ್ ಹೋಮ್‌ಗಳನ್ನು ನಡೆಸುತ್ತಿದ್ದಾರೆಯೋ ಅವುಗಳನ್ನು ಸರ್ಕಾರದವರೇ ನಡೆಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯ ವಿಷಯದಲ್ಲಿ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಈಗ ಡಿವಿಜನ್‌ಗಳಲ್ಲಿರತಕ್ಕ ಕೆಟ್ಟುಹೋಗಿರತಕ್ಕ ಮೆಷನರಿಗಳನ್ನೂ, ಮೋಟಾರ್ ಕಾರ್‌ಗಳನ್ನೂ ಮತ್ತು ಟ್ರಕ್ಕರುಗಳನ್ನೂ ರಿಪೇರಿ ಮಾಡಬೇಕಾಗಿದ್ದರೆ ಅವುಗಳಿಗೆ ಸುಮಾರು ಎರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಈಗ ಸರ್ಕಾರದ ವಶದಲ್ಲಿರತಕ್ಕ ಹಳೆಯ ಮತ್ತು ಕೆಟ್ಟುಹೋಗಿರತಕ್ಕ ಮೆಷನರಿ ಏನಿದೆ ಅದನ್ನು ಆಕ್ಷನ್ ಮಾಡಿ ಹೊಸ ಮೆಷನರಿಯನ್ನು ತೆಗೆದುಕೊಂಡು ಅದನ್ನು ಉಪಯೋಗ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಮೊನ್ನೆ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ನಮ್ಮಲ್ಲಿ ಕೆಟ್ಟುಹೋಗಿರತಕ್ಕ ಮೆಷನರಿ (ಸಿಕ್ ಮೆಷನರಿ) ಇದ್ದರೂ ಕೂಡ ಬೇರೆ ಮೆಷನರಿಯಿಂದ ಇವೊತ್ತಿನ ದಿವಸ ನಾವು ಕೆಲಸವನ್ನು ಸಾಧನೆ ಮಾಡುತ್ತಿದ್ದೇವೆ ಎಂದು ಹೇಳಿದರು. ಆದ್ದರಿಂದ ಕೆಟ್ಟುಹೋಗಿರತಕ್ಕ ಮೆಷನರಿ (ಸಿಕ್ ಮೆಷನರಿ) ಏನಿದೆ ಅದನ್ನು ಮಾರಬೇಕೆಂದು ನಾನು ಹೇಳುತ್ತೇನೆ.

ಇನ್ನು ಕೊನೆಯದಾಗಿ ನಾನ್-ಗೆಜೆಟೆಡ್ ನೌಕರರ ಬಗ್ಗೆ ಒಂದೆರಡು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ವಿರೋಧ ಪಕ್ಷದವರು ಒಂದು ಪ್ರದರ್ಶನ ಅಥವಾ ಪ್ರಚಾರ ಮಾಡುವುದರ ಸಲುವಾಗಿ ಈ ರೀತಿ ನಾನು ಹೇಳುತ್ತೇನೆ ಎಂದು ತಾವು ತಿಳಿದುಕೊಳ್ಳಬಾರದು. ಈಗಾಗಲೇ

(ಶ್ರೀ ಸಿದ್ದಪ್ಪ ಕಾಶೀನಾಥ್)

ನಾನ್-ಗೆಜೆಟೆಡ್ ನೌಕರರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ನಾವೆಲ್ಲರೂ ಪತ್ರಿಕೆಯಲ್ಲಿ ಓದಿದ್ದೇವೆ. ಈಗಾಗಲೇ ಕಳೆದ ತಿಂಗಳು 26ನೇ ತಾರೀಖು ಮತ್ತು ಈ ತಿಂಗಳು 4-5ನೇ ತಾರೀಖಿನ ದಿವಸ ನಾನ್-ಗೆಜೆಟೆಡ್ ನೌಕರರು ಮೌನ ಸತ್ಯಾಗ್ರಹವನ್ನು ಆಚರಿಸಿದರು, ಮತ್ತೆ ಇದೇ ತಿಂಗಳು 13ನೇ ತಾರೀಖಿನ ದಿವಸ ಉಪವಾಸ ಮುಷ್ಕರವನ್ನು ಹೂಡುತ್ತೇವೆಂದು ಹೇಳಿರತಕ್ಕದ್ದನ್ನು ಪತ್ರಿಕೆಯಲ್ಲಿ ಓದಿದ್ದೇವೆ. ಈಗಾಗಲೇ ಮಾನ್ಯ ಅರ್ಥಿಕ ಸಚಿವರು ಮದ್ರಾಸಿಗೆ ಹೋಗಿ ಫೈನಾನ್ಸ್ ಕಮಿಷನ್ನಿನವರೊಡನೆ ಚರ್ಚೆಮಾಡಿಕೊಂಡು ಬಂದಿದ್ದಾರೆ. ಈಗಾಗಲೇ ನಾನ್-ಗೆಜೆಟೆಡ್ ನೌಕರರು ತಮ್ಮ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಅದನ್ನು ಸರ್ಕಾರದವರು ವಿಮರ್ಶೆಮಾಡಿ ಕೇಂದ್ರ ಸರ್ಕಾರದವರು ತಮ್ಮ ನೌಕರರಿಗೆ ಏನು ತುಟ್ಟೀ ಭತ್ಯವನ್ನು ಕೊಟ್ಟಿದ್ದಾರೆಯೋ ಅದೇ ರೀತಿ ನಮ್ಮ ರಾಜ್ಯದ ನೌಕರರಿಗೂ ತುಟ್ಟೀಭತ್ಯವನ್ನು ಕೊಟ್ಟು ಅವರನ್ನು ಸಮಾಧಾನ ಪಡಿಸಬೇಕು. ಆ ರೀತಿ ಮಾಡಿದರೆ ಸರ್ಕಾರಿ ಕೆಲಸಗಳು ಸುಗಮವಾಗಿ ಸಾಗುತ್ತವೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಸಭಾಪತಿಗಳೇ, ನಮ್ಮ ಆರ್ಥಿಕ ಮಂತ್ರಿಗಳು ನಮಗೆ ಅಜಮಾಸು 4 ಕೋಟಿ ರೂಪಾಯಿಯ ಕೊರತೆಯ ಆಯವ್ಯಯವನ್ನು ನಮ್ಮ ಮುಂದೆ ಇರಿಸಿದ್ದಾರೆ. ಈ ಆಯವ್ಯಯ ಪಟ್ಟಿಯನ್ನು ನೋಡಿದರೆ, ನಮ್ಮ ಮೈಸೂರಿನ ಆರ್ಥಿಕ ಸ್ಥಿತಿ ಯಾವ ದಿಶೆಯಲ್ಲಿ ನಡೆದಿದೆ ಎಂಬುದನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಸ್ವತಂತ್ರರಾದ ಮೇಲೆ ನಾವು ನಮ್ಮ ಅರ್ಥ ನೀತಿಧೋರಣೆ ಹೇಗೆ ಇರಬೇಕು, ಸಮಾಜದಲ್ಲಿ ಎಲ್ಲರ ಕಲ್ಯಾಣ ಹೇಗೆ ಆಗಬೇಕು ಎಂದು ವಿಚಾರಿಸಿ ಒಂದು ನಿರ್ಣಯಕ್ಕೆ ಬಂದು, ‘ ಸಮಾಜವಾದಿ ಸಮಾಜ ರಚನೆಯೇ ’ ನಮ್ಮ ಗುರಿಯಾಗಿರಬೇಕು ಎಂದು ಒಪ್ಪಿಕೊಂಡು ನಾವು, ಈಗ ನಮ್ಮ ಅರ್ಥ ನೀತಿಯನ್ನು ಯಾವ ಪ್ರಕಾರ ರೂಪಿಸಲಿಕ್ಕೆ ಹತ್ತಿದ್ದೇವೆ ಎಂದರೆ, ಶ್ರೀಮಂತರನ್ನು ಹೆಚ್ಚು ಶ್ರೀಮಂತರನ್ನಾಗಿಯೂ, ಬಡವರನ್ನು ಇನ್ನೂ ಬಡವರನ್ನಾಗಿಯೂ ಮಾಡಲು ಹೊರಟಿದ್ದೇವೆ ಎಂದು ಕಂಡುಬರುತ್ತದೆ. ಮುಂದುವರಿದ ರಾಷ್ಟ್ರಗಳಿಂದ ಸಾಲ ತಂದು, ದೊಡ್ಡ ಯೋಜನೆಗಳಿಗೆ ಹಣ ವಿನಿಯೋಗಿಸಿದ್ದರಿಂದ ರಿಟರ್ನ್ಸ್ (ಉತ್ಪನ್ನ) ಸಾಕಷ್ಟು ಬರುತ್ತಾ ಇಲ್ಲ. ಮುಖ್ಯವಾಗಿ ನಾವು ಯಾವ ಉದ್ಯಮಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕೋ ಅದಕ್ಕೆ ಪ್ರಾಶಸ್ತ್ಯವನ್ನು ಕೊಡುತ್ತಾ ಇಲ್ಲವೇ—ಅನ್ನುವುದು ಸ್ಪಷ್ಟವಾಗಿದೆ. ದೊಡ್ಡ ದೊಡ್ಡ ಉದ್ಯಮಗಳಿಗೆ, ದೊಡ್ಡ ನೀರಾವರಿಗಳಿಗೆ ಹೆಚ್ಚು ಹಣವನ್ನು ಹಾಕಿದ್ದಾರೆ ಯಾವ ಉದ್ಯಮಗಳಿಗೆ ಪ್ರಾಶಸ್ತ್ಯ ಕೊಡಬೇಕೋ, ಅವಕ್ಕೆ ಕೊಡದೆ ಇದ್ದದ್ದರಿಂದ, ಸಮಾಜಕ್ಕೆ ಹಣದ ಮುಗ್ಗಟ್ಟು ತಲೆದೋರಿದೆ. ನಮ್ಮ ದೇಶದಲ್ಲಿ, ಅದರಲ್ಲಿ ಮೈಸೂರಿನಲ್ಲಿ, ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ದೊಡ್ಡ ದೊಡ್ಡ ಉದ್ಯಮಗಳನ್ನು ಸ್ಥಾಪಿಸುವುದರಿಂದ, ಬಂಡವಾಳ ಹೆಚ್ಚು ಹಿಡಿದು, ಜನರನ್ನು (ದೊಡ್ಡ ಉದ್ಯಮಗಳು) ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದಿಲ್ಲ. ಮೆಷೀನುಗಳೇ ಹೆಚ್ಚು ಕೆಲಸ ಮಾಡುತ್ತವೆ. ಅದೇ ನಾವು ಚಿಕ್ಕ ಚಿಕ್ಕ ಉದ್ಯಮಗಳನ್ನು ಸ್ಥಾಪಿಸಿದರೆ, ಜನರಿಗೆ ಹೆಚ್ಚು ಹೆಚ್ಚು ಉದ್ಯೋಗ ದೊರೆತು ನಿರುದ್ಯೋಗ ಸಮಸ್ಯೆ ಕಡಿಮೆಯಾಗುತ್ತದೆ ; ಬಂಡವಾಳವೂ ಕಡಿಮೆ ಹಿಡಿಯುತ್ತೆ ಮತ್ತು ಉತ್ಪನ್ನ ತೀವ್ರ ಬರುತ್ತದೆ. ಕಾರಣ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕು.

ನೀರಾವರಿ ಸಲುವಾಗಿ ಸಾಕಷ್ಟು ಹಣ ಒದಗಿಸಬೇಕು. ದೊಡ್ಡ ನೀರಾವರಿಗೆ ಹೇರಳವಾದ ಹಣವನ್ನು ವಿನಿಯೋಗಿಸುತ್ತಾರೆ ; ಆದರೆ ಉತ್ಪನ್ನ ತೀವ್ರ ಸರಿಯಾಗಿ ಬರುತ್ತಿಲ್ಲ. ಚಿಕ್ಕ ನೀರಾವರಿಯಿಂದ ಪ್ರತಿಫಲ (ರಿಟರ್ನ್) ತ್ವರಿತವಾಗಿ ಬಂದಿದೆ, ಬರಲಿಕ್ಕೆ ಹತ್ತಿದೆ. ಅಂದಮೇಲೆ ಯಾವುದಕ್ಕೆ ಪ್ರಾಶಸ್ತ್ಯವನ್ನು ಕೊಡಬೇಕು ಎಂಬುದನ್ನು ಅರ್ಥಸಚಿವರು ತಿಳಿದುಕೊಂಡಿದ್ದಾರೆ ಅನ್ನುವುದರಲ್ಲಿ ಅನುಮಾನವಿಲ್ಲ. ಆದರೂ ಕೋಟ್ಯಾನುಕೋಟಿ ಹಣವನ್ನು ದೊಡ್ಡ ನೀರಾವರಿ ಪ್ರಾಜೆಕ್ಟುಗಳಿಗೆ ವಿನಿಯೋಗಿಸಿದ್ದು, ಇವುಗಳ ಕಾರ್ಯ ತ್ವರಿತವಾಗಿ ಮುಗಿಯದ್ದರಿಂದ, ಪ್ರತಿಫಲ ತೀವ್ರ ದೊರೆಯದಂತಾಗಿದೆ. ಅದರಂತೆ ದೊಡ್ಡ ದೊಡ್ಡ ಉದ್ಯಮಗಳಿಗೆ ಮಹತ್ವ ಕೊಟ್ಟು ಕೋಟ್ಯಾಂತರ ರೂಪಾಯಿ ಅವುಗಳಲ್ಲಿ ತೊಡಗಿಸಿದ್ದರಿಂದ, ನಿರೀಕ್ಷಿಸಿದಷ್ಟು ಉತ್ಪನ್ನ ಬರುತ್ತಿಲ್ಲ, ಉದ್ಯೋಗ ಸಮಸ್ಯೆ ಬಗೆ ಹರಿಯಲಿಲ್ಲ, ಹಳ್ಳಿಗಾಡಿನ ಬಡತನ ಹೋಗದಂತಾಗಿದೆ. ಒಂದಾನೊಂದು ಕಾಲಕ್ಕೆ ಮೈಸೂರು ಚಿಕ್ಕ ಉದ್ಯಮಗಳಲ್ಲಿ ಹೆಸರಾಗಿತ್ತು. ಅಂಥ ರಾಜ್ಯದಲ್ಲಿ ಈಗ ಚಿಕ್ಕ ಉದ್ಯಮಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು, ಹಳ್ಳಿಗಳಲ್ಲಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಚಿಕ್ಕ ಉದ್ಯಮಗಳಿಗೆ ಪ್ರಾಶಸ್ತ್ಯ ಕೊಟ್ಟು, ಸರಕಾರ ಸಹಾಯ, ಸಹಕಾರವನ್ನು ಈಯುವುದರಿಂದ, ನಿರುದ್ಯೋಗ ಸಮಸ್ಯೆ ನಿವಾರಣವಾಗಿ ಗ್ರಾಮಾಂತರ ಆರ್ಥಿಕ ಪರಿಸ್ಥಿತಿ ಸುಧಾರಿಸಬಹುದು.

ಆಮೇಲೆ ಒಂದೆರಡು ವಿಷಯಗಳ ಮೇಲೆ ತಮ್ಮ ಗಮನವನ್ನು ಸೆಳೆಯಬೇಕೆಂದಿದ್ದೇನೆ. ಒಕ್ಕಲುತನ ಸುಧಾರಣೆಯ ಸಲುವಾಗಿ ಎಷ್ಟೋ ಸ್ಕೀಮುಗಳನ್ನು ಹಾಕಿಕೊಂಡಿರುವಿರಿ. ಅವುಗಳಲ್ಲಿ ಅತಿ ಮುಖ್ಯವೆಂದರೆ ನೀರಾವರಿ ಸೌಕರ್ಯವನ್ನು ಒದಗಿಸುವುದು, ಉತ್ತಮ ಬಿತ್ತನೆಯ ಬೀಜವನ್ನು ಒದಗಿಸುವುದು, ಸಾಯಿಲ್ ಕನ್‌ಸರ್ವೇಷನ್ ಮತ್ತು ಇನ್ನೂ ಅನೇಕ ಉತ್ತಮ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಆದರೆ ನಿಜವಾಗಿಯೂ ರೈತರು ಈ ಸ್ಕೀಮುಗಳ ಪ್ರಯೋಜನ ಪಡೆದಿರುವರೆ? ಒಕ್ಕಲುತನ ಖಾತೆಯವರು ರೈತರಿಗೆ ಹೇಳಿಕೊಟ್ಟು ಅವರಿಗೆ ಹೆಚ್ಚು ಬೆಳೆಯಲು ಸಹಾಯ ಸಹಕಾರ ನೀಡುತ್ತಾರೆಯೇ ಎಂದು ವಿಚಾರಿಸಿದರೆ, ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ: ಖಾತೆಯನ್ನು ಪೂರ್ತಿ ಮುಚ್ಚಬೇಕು ಎಂದು. ದೇಶದ ಪ್ರಗತಿಗೆ, ರೈತರ ಉದ್ಧಾರಕ್ಕೆ ಇದ್ದಂಥ ಈ ಖಾತೆ ಇಂದು ಬಹಳೇ ಕೆಟ್ಟಿದೆ; ಅದನ್ನು ತೀವ್ರ ಸುಧಾರಿಸಿದಷ್ಟು ದೇಶಕ್ಕೆ, ರಾಜ್ಯಕ್ಕೆ, ರೈತರಿಗೆ ಕ್ಷೇಮ. ಕಳೆದ ಕೆಲವು ವರ್ಷಗಳಿಂದ ಒಕ್ಕಲುತನ ಖಾತೆಯಿಂದ ಉಪಯೋಗ ಎಷ್ಟು ಆಗಿದೆ ಹೇಳಿ?

ಇವತ್ತಿನ ದಿವಸ ಅಡಿಷನಲ್ ಡಿ. ಎ. ಓ.ರವರನ್ನು ನೇಮಿಸಬೇಕೆಂದಿರುವಿರಿ. ಇದ್ದ ಡಿ. ಎ. ಓ.ಗಳಿಗೇ ಸರಿಯಾದ ಕೆಲಸ ನೇಮಿಸಿಲ್ಲ. ಅವರಲ್ಲಿಯೂ ಅತೃಪ್ತಿ ಹೆಚ್ಚಾಗಿದೆ. ಇಂಥವರು ಯಾವ ಕೆಲಸವನ್ನು ಮಾಡುತ್ತಿದ್ದಾರೆ ಹೇಳಿ? ಇವರು ರೈತರಿಗೆ ಯಾವ ಕಾರ್ಯವನ್ನು ಮಾಡಿಕೊಟ್ಟು ಸಹಾಯಕರಾಗಿದ್ದಾರೆನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಿಕೊಡಬೇಕು. ತಮಗೆ ಬುಲ್‌ಡೋಜರದ ಸಂಗತಿಯನ್ನು ವ್ಯಸನದಿಂದ ಹೇಳಬೇಕಾಗಿದೆ. ಈಗ ಬಿಜಾಪುರದಲ್ಲಿ ಕೆಲವೊಂದು ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳನ್ನು ಇಟ್ಟಿರುತ್ತಾರೆ. ಅವು 3—4 ತಿಂಗಳಿಂದ ಕೆಲಸಮಾಡುವುದಕ್ಕೆ ಸಾಧ್ಯವಾಗಿಲ್ಲ, ಏಕೆಂದರೆ ಎಣ್ಣೆ ಇಲ್ಲ. ನಾವು ಡಿ. ಎ. ಓ. ಸಾಹೇಬರನ್ನು ಕೇಳಿದರೆ, ಎಣ್ಣೆ ಇಲ್ಲ ಸ್ವಾಮೀ, ಸರಕಾರಕ್ಕೆ ಬರೆದಿದ್ದೇವೆ ಎಂದು 3 ತಿಂಗಳಿನಿಂದಲೂ ಹೇಳುತ್ತಿದ್ದಾರೆ. ಹೀಗಾದರೆ ನಿಮ್ಮ ಖಾತೆಯಿಂದ ನಮ್ಮ ರೈತರಿಗೆ ಏನು ಸುಖವಾಗುತ್ತದೆ ಅನ್ನುವುದನ್ನು ವಿಚಾರಮಾಡಬೇಕು. ನಾನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟನ್ನು ದುರುದ್ದೇಶದಿಂದ ಟೀಕಿಸುತ್ತಿಲ್ಲ. ನೀವು ಸ್ವಲ್ಪ ಎಚ್ಚರಗೊಂಡು, ನಿಮ್ಮ ದೃಷ್ಟಿಯನ್ನು ಆ ಕಡೆ ಹೊರಳಿಸಿ ಅನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ; ಮತ್ತಾವ ದೃಷ್ಟಿ ಇಲ್ಲ. ಟ್ರಾಕ್ಟರುಗಳಿಗೆ, ಬುಲ್‌ಡೋಜರುಗಳಿಗೆ ಎಣ್ಣೆ ಕೊಳ್ಳಲಿಕ್ಕೆ, ರಿಪೇರಿ ಮಾಡಲಿಕ್ಕೆ ಅಲ್ಲಿಯ—ಅಧಿಕಾರಿಗಳಿಗೆ ಅಧಿಕಾರ ಕೊಡಿರಿ. ಪ್ರತಿಯೊಂದು ಸಣ್ಣ ಕೆಲಸಕ್ಕೆ ಬೆಂಗಳೂರು ಕಡೆಗೆ ನೋಡುವುದು ನಿಲ್ಲಲಿ.

ಈಗ ನಮ್ಮ ಆರ್ಥಿಕ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ: ನಮಗೆ ನೀರಾವರಿ ಯೋಜನೆಯಿಂದ ಎಷ್ಟು ಉತ್ಪನ್ನ ಬರುತ್ತದೆ ಮತ್ತು ಬಂದಿದೆ, ಸಾಯಿಲ್ ಕನ್‌ಸರ್ವೇಷನ್ನಿನಿಂದ ಎಷ್ಟು ಉತ್ಪನ್ನ ಬರುತ್ತದೆ ಮತ್ತು ಬಂದಿವೆ ಎಂದು. ಇವತ್ತು ಬಂಡಿಂಗ್ ಕೆಲಸ ನಡೆಯುತ್ತಾ ಇದೆ. ಬಂಡಿಂಗ್ ಮಾಡಿದ ಕೆಲವು ವರ್ಷಗಳ ಮೇಲೆ ಉತ್ಪನ್ನ ಬರಲಿಕ್ಕೆ ಹತ್ತುತ್ತದೆ. ಬಂಡಿಂಗ್ ಹಾಕಿದ ಮೊದಲು ಎರಡು ವರ್ಷಗಳಲ್ಲಿ ಅಷ್ಟು ಉತ್ಪನ್ನ ಬರುವುದಿಲ್ಲ; ಅಂಥ ಬಂಡಿಂಗ್ ಹಾಕಿದ ಕ್ಷೇತ್ರಗಳಿಂದ, ಹಾಕಿದ ವರ್ಷವೇ ಹೆಚ್ಚು ಉತ್ಪನ್ನವನ್ನು ತೋರಿಸುತ್ತಿದ್ದೀರಿ. ಬಂಡಿಂಗ್ ಆದ 3-4 ವರ್ಷಗಳ ಮೇಲೆ ನಮಗೆ ಅದರ ಪ್ರತಿಫಲ ದೊರೆಯುವುದು. ಬಂಡಿಂಗ್ ಹಾಕಿದ ವರ್ಷವೇ ಹೆಚ್ಚು ಬೆಳೆ ಬರಲಿಕ್ಕೆ ಸಾಧ್ಯವಿಲ್ಲ. ಬಂಡಿಂಗ್ ಹಾಕಿದ ವರ್ಷವೇ ಉತ್ಪನ್ನ ಹೆಚ್ಚಾಗುತ್ತದೆ, ಹೆಚ್ಚಾಗಿದೆಯೆಂದು ಅಂಕಿ ಅಂಶಗಳನ್ನು ಕೊಟ್ಟಿರುವುದರಿಂದ, ನಿಜವಾಗಿಯೂ ಆ ಅಂಕೆಸಂಖೆಗಳು ಅಷ್ಟು ಸಮಂಜಸವಾಗಿಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಬಿ. ಡಿ. ಜತ್ತಿ.—ಶ್ರೀ ಗುರೆಡ್ಡಿಯವರು ಬಿಜಾಪುರ ತಾಲ್ಲೂಕಿನೊಳಗೆ ಸಾಯಿಲ್ ಕನ್‌ಸರ್ವೇಶನ್ ಮತ್ತು ಬಂಡಿಂಗ್ ಯೋಜನೆಗಳಿಂದ ಜಮೀನುಗಳಿಗೆ ಅದಷ್ಟು ಲಾಭವಾಗಿರುವುದನ್ನು ಒಪ್ಪುತ್ತೀರೋ, ಒಪ್ಪುವುದಿಲ್ಲವೋ?

ಶ್ರೀ ಎಸ್ ಎಂ. ಗುರೆಡ್ಡಿ.—ಬಂಡಿಂಗ್ ಕಾರ್ಯ ಮುಗಿದ ವರ್ಷದಲ್ಲಿಯೇ ಉತ್ಪನ್ನ ಬರಲಿಕ್ಕೆ ಸಾಧ್ಯವಿಲ್ಲ; 3-4 ವರ್ಷದ ಮೇಲೆ ಉತ್ಪನ್ನ ಬರುತ್ತದೆ. ನೀವು ಯಾವ ಭೂಮಿಯಲ್ಲಿ ಬಂಡಿಂಗ್ ಮಾಡಿದ್ದೀರೋ, ಆ ಭೂಮಿಯಲ್ಲಿ ಅದೇ ವರ್ಷ ನಿಮಗೆ ಉತ್ಪನ್ನ ಬಂದಿದೆ, ಬರುತ್ತದೆ ಎಂದು ತೋರಿಸುತ್ತಿರುವುದು ಸಮಂಜಸವಲ್ಲವೆಂದು ಹೇಳುತ್ತಿದ್ದೇನೆ.

ಇನ್ನೊಂದು ವಿಷಯವೇನೆಂದರೆ, ನೀವು ಒಕ್ಕಲಗರಿಗೆ ಬಾವಿ ತೋಡಲಿಕ್ಕೆ, ಪಂಪು ಸೆಟ್ಟುಗಳನ್ನು ಕೊಳ್ಳಲಿಕ್ಕೆ ತಗಾಯಿ ರೂಪದಲ್ಲಿ ಸಾಲ ಕೊಡುತ್ತಿದ್ದೀರಿ, ನೀವು ಈಗ ಕೊಡುವ ತಗಾಯಿ ಹಣ ಹೆಚ್ಚಾಗಿ ಅನುಕೂಲ ರೈತರಿಗೇನೇ ಮುಟ್ಟುತ್ತದೆ, ಯಾಕೆಂದರೆ ತಗಾಯಿ ಸಾಲ ಕೊಡುವ ತಮ್ಮ ನೀತಿಯೇ ಹಾಗೆ ಇದೆ. ಕಡಿಮೆ ಭೂಗಂದಾಯ ಕೊಡುವ ರೈತನಿಗೆ, ಅಂದರೆ 5ರಿಂದ 10 ಎಕರೆ ಜಮೀನು ಉಳ್ಳಂಥ ರೈತನಿಗೆ ನೀವು ಕೊಡುವ ತಗಾಯಿ ಸಾಲದ ಧೋರಣೆಯಿಂದ ಸಹಾಯ

(ಶ್ರೀ ಎಸ್. ಎಂ. ಗುಳೆಡ್ಡ)

ಸಲ್ಲುತ್ತಿಲ್ಲ. ಇದರಿಂದ ಅನುಕೂಲ ಇದ್ದ ಜನರಿಗೇನೇ ನಾವು ಸಹಾಯ ಸಲ್ಲಿಸಲಿಕ್ಕೆ ಹತ್ತಿದ್ದೇವೆ. ಸಣ್ಣ ರೈತರನ್ನು ಕಡೆಗಣಿಸಿದ್ದೇವೆಂದು ಹೇಳಬಹುದು. ಆದಕಾರಣ ನಿಜವಾಗಿಯೂ ನಮ್ಮ ಹಳ್ಳಿಗಾಡಿನ, ಅದರಲ್ಲಿ ಸಣ್ಣ ರೈತನ ಪರಿಸ್ಥಿತಿ ಸುಧಾರಿಸಬೇಕಾದರೆ, ಹಳ್ಳಿಯ ರೈತರ ಸ್ಥಿತಿ ಉತ್ತಮವಾಗಬೇಕಾದರೆ, 5-10 ಎಕರೆ ಭೂಮಿ ಇದ್ದಂಥವನಿಗೂ ಬಾವಿ ಅಗೆಸಲಿಕ್ಕೆ, ಪಂಪುಸೆಟ್ಟುಗಳನ್ನು ಕೊಳ್ಳಲಿಕ್ಕೆ ತಗಾಯಿಸಾಲ ಕೊಟ್ಟರೆ ಮಾತ್ರ ಆತನ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆ ಕಾರಣ ಸರಕಾರದವರು ಹಳ್ಳಿಯ ರೈತನ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಹೆಚ್ಚು ಗಮನ ಕೊಡುತ್ತಾರೆಂದು ಭಾವಿಸಿ ಒಕ್ಕಲುತನದ ಖಾತೆ ಚುರುಕಾಗಿ ಕೆಲಸ ಮಾಡಿ, ರೈತರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಸಹಾಯವಾಗಿ ನಿಲ್ಲಲಿ ಎಂದು ವಿನಂತಿಸುತ್ತೇವೆ. ಇದಕೂ ಹೆಚ್ಚಿಗೆ ಈ ಖಾತೆಯ ಬಗ್ಗೆ ಏನೂ ಹೇಳಲಾರೆ, ಅವರೇ ತಿಳಿದುಕೊಳ್ಳಲಿ.

ವಿದ್ಯುಚ್ಛಕ್ತಿ ಸಲುವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಕೊರತೆ ಇನ್ನು ಕೆಲದಿನಗಳಲ್ಲಿ ಪರಿಹಾರವಾಗುತ್ತದೆಂದು ಆಸೆ ಮಾಡಿಕೊಂಡಿದ್ದೆವು. ಇದೇ ಸಮಯದಲ್ಲಿ ಒಂದು ಮಾತು ಕೇಳುತ್ತಿದ್ದೇವೆ. ನಮ್ಮ ಸಮೀಪದ ರಾಜ್ಯಗಳಿಗೆ ವಿದ್ಯುಚ್ಛಕ್ತಿ ಕೊಡಲಿಕ್ಕೆ ತಯಾರಾಗಿದ್ದೇವೆ. ಸದರನ್ ಗ್ರಿಡ್ ಕೂಡ ಮಾಡಿದ್ದಾಗಿದೆ. ಈಗಾಗಲೇ ನಾವು ಗೋವಾಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವ ಕಾರ್ಯ ಪ್ರಾರಂಭವಾಗಿದೆ. ನಾಳೆ ಮದ್ರಾಸಕ್ಕೆ, ಆಂಧ್ರಕ್ಕೆ ಮತ್ತು ಕೇರಳಕ್ಕೆ ಕೊಡುವ ಪ್ರಸಂಗ ಬಂದಿವೆ—ಕೊಡಲಿ, ನಮ್ಮ ಅಭ್ಯಂತರವಿಲ್ಲ; ನಮ್ಮ ರಾಜ್ಯಕ್ಕೆ ಬೇಕಾಗುವಷ್ಟು, ಅಂದರೆ ದೊಡ್ಡ ದೊಡ್ಡ ಉದ್ಯಮಗಳಿಗೆ, ಚಿಕ್ಕ ಚಿಕ್ಕ ಕೈಗಾರಿಕೆಗಳಿಗೆ, ನೀರಾವರಿ ಸಲುವಾಗಿ ಬೇಕಾಗುವಷ್ಟು ವಿದ್ಯುಚ್ಛಕ್ತಿಯನ್ನು ಇಟ್ಟುಕೊಂಡು, ನಮ್ಮ ಎಲ್ಲ ಮಾರ್ಗಗಳೂ ಈಡೇರಿದ ನಂತರ ಅವು ಎರಡನೆಯ ರಾಜ್ಯಗಳಿಗೆ ಕೊಡಬೇಕು. ನಮಗೆ ಕೊರತೆ ಮಾಡಿಕೊಂಡು ಕೊಡಲಿಕ್ಕೆ ತಯಾರಾಗಬೇಡಿರಿ. ಬಿಜಾಪುರದ ಸಲುವಾಗಿ ಹೇಳಬೇಕಾದರೆ, ಅಲ್ಲಿ 5 ನದಿಗಳು ಹರಿಯುತ್ತವೆ. ಆ ನದಿಗಳ ದಂಡೆಗುಂಟ ಎಲೆಕ್ಟ್ರಿಕ್ ಲೈನ್ ಹಾಕಿ, ಪವರ್ ಕೊಟ್ಟರೆ ಹೆಚ್ಚು ಬೆಳೆಗಳನ್ನು ಬೆಳೆಯಲಿಕ್ಕೆ ರೈತರಿಗೆ ಸಾಧ್ಯವಾಗುತ್ತದೆ. ಅದನ್ನು ನಿರ್ಲಕ್ಷ್ಯಮಾಡಿ, ಕೇವಲ ಮದ್ರಾಸಿಗೆ, ಆಂಧ್ರಕ್ಕೆ, ಗೋವಾಕ್ಕೆ ಕೊಟ್ಟು ನಮ್ಮ ಪ್ರದೇಶವನ್ನು ನಿರ್ಲಕ್ಷ್ಯಮಾಡಬೇಡಿ. ನಮ್ಮದು ಆರ್ಥಿಕವಾಗಿ ಬಹಳ ಹಿಂದುಳಿದಂಥ ಪ್ರದೇಶ, ಇದಕ್ಕಾಗಿ ಯಾವ ಸೌಕರ್ಯವನ್ನು ಕೊಟ್ಟಿದ್ದೀರಿ ? ಕೊಡಲಿಕ್ಕೆ ಸಾಧ್ಯವಾಗಿಲ್ಲ. ನೀರಾವರಿ ಸೌಕರ್ಯಗಳು ಇಲ್ಲವೇ ಇಲ್ಲ. ಈಗ ನೀವು ನಮ್ಮ ಪ್ರದೇಶಕ್ಕೆ ಒಂದೆರಡು ಲಕ್ಷ ಕಿಲೋವ್ಯಾಟ್ ವಿದ್ಯುಚ್ಛಕ್ತಿಯನ್ನು ರಿಜರ್ವ್ ಮಾಡಿ, ನೀರಾವರಿಯಲ್ಲಿ ಹಿಂದುಳಿದ ಪ್ರದೇಶವಾದ ಬಿಜಾಪುರ ಜಿಲ್ಲೆಗೆ ತೆಗೆದಿರಿಸಿ (ಲಿಫ್ಟ್ ಇರ್ರಿಗೇಶನಕ್ಕೆ), ಹೆಚ್ಚು ವಿದ್ಯುಚ್ಛಕ್ತಿಯನ್ನು ಸಂಬಂಧಿಸಿದ ಸಮೀಪದ ರಾಜ್ಯಗಳಿಗೆ ಕೊಡಲಿಕ್ಕೆ ಅಡ್ಡಿ ಇಲ್ಲ. ನಮ್ಮನ್ನು ಕಡೆಗಾಣಿಸಿ, ಎರಡನೇ ರಾಜ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದು ಅಷ್ಟು ಸರಿಯಾದ, ಸಮಂಜಸವಾದ ಧೋರಣೆಯಲ್ಲ ಎಂದು ನಾನು ಭಾವಿಸುತ್ತೇನೆ.

ಇನ್ನು ಒಂದೇ ಒಂದು ಇಂಡಸ್ಟ್ರಿ ಬಗ್ಗೆ ಇಲ್ಲಿ ಹೇಳಬೇಕಾಗಿದೆ. ಅದು ಫಿಲಂ ಇಂಡಸ್ಟ್ರಿ ಬಗ್ಗೆ. ನಮ್ಮ ರಾಜ್ಯದಲ್ಲಿ ಇದುವರೆಗೂ ಫಿಲಂ ಇಂಡಸ್ಟ್ರಿ ಸ್ಥಾಪಿತವಾಗಿಲ್ಲ ನಮ್ಮ ಸರಕಾರಕ್ಕೆ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ರೂಪದಿಂದ ಸುಮಾರು ಒಂದು ಕೋಟಿ, ಇಪ್ಪತ್ತೈದು ಲಕ್ಷ ರೂಪಾಯಿಗಳಷ್ಟು ಉತ್ಪನ್ನ ಬರುತ್ತಲಿದೆ. ಇದರ ಟರ್ನ್ ಓವರು ಸುಮಾರು ಐದಾರು ಕೋಟಿಗಳಿಗೂ ಮೇಲ್ಪಟ್ಟು ಇರುತ್ತದೆ. ಆದುದರಿಂದ ನಮ್ಮ ರಾಜ್ಯದಲ್ಲಿ ಒಂದು ಫಿಲಂ ಸ್ಟುಡಿಯೋ ಆದರೆ ಡೈರೆಕ್ಟಾಗಿಯೋ, ಇಂಡೈರೆಕ್ಟಾಗಿಯೋ ನಮ್ಮ ರಾಜ್ಯದ ಜನತೆಗೆ ಸಹಾಯವಾಗುತ್ತದೆ. ಕಾರಣ ಯಾರಾದರೂ ಸ್ಟುಡಿಯೋ (ಫಿಲಂ ಇಂಡಸ್ಟ್ರಿಯನ್ನು) ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ನಾವು ಸುಮಾರು 40:50 ಸಾವಿರ ರೂಪಾಯಿಗಳಷ್ಟು ಹಣವನ್ನು ಸಹಾಯವನ್ನಾಗಿ ಕೊಟ್ಟರೆ ಅವರಿಗೆ ಒಂದು ತರಹದ ಎನ್‌ಕರೇಜ್‌ಮೆಂಟು ಕೊಟ್ಟಂತಾಗುತ್ತದೆ ಮತ್ತು ಒಂದು ಇಂಡಸ್ಟ್ರಿ ನಮ್ಮ ರಾಜ್ಯದಲ್ಲಿ ಮಾಡುವುದಕ್ಕೂ ಅನುಕೂಲಮಾಡಿಕೊಟ್ಟಂತಾಗುತ್ತದೆ. ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ವಿ. ಘಾಯುಡೆ (ಅಂಕೋಲ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇಟ್ಟಿರುವ ಈ ಮುಂಗಡ ಪತ್ರವನ್ನು ಸ್ವಾಗತಿಸುತ್ತಾ ನನ್ನ ಜಿಲ್ಲೆಯ ಬಗ್ಗೆ ಕೆಲವು ಸಂಗತಿಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಇದಕ್ಕೆ ಮುಂದೆ ಮಾತನಾಡಿದ ಮಾನ್ಯ ಸದಸ್ಯರು ಆಹಾರ ಧಾನ್ಯದ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಇದನ್ನು ಹೇಗೆ ಬಿಡಿಸಬೇಕು ಎನ್ನುವುದರ ಬಗ್ಗೆ ನಾವು ಸಲ್ಪ ಯೋಚನೆ ಮಾಡಬೇಕು. ನನ್ನ ಜಿಲ್ಲೆಯ ವೈಶಿಷ್ಟ್ಯದ ಬಗ್ಗೆ ಇಲ್ಲಿ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ

ಶೇಕಡಾ 84 ರಷ್ಟು ಅರಣ್ಯ ಪ್ರದೇಶವಿದೆ. ಅದರಲ್ಲೂ ನನ್ನ ತಾಲ್ಲೂಕಿನ ಮಟ್ಟಿಗೆ ಹೇಳಬೇಕಾದರೆ ಶೇಕಡಾ 92ರಷ್ಟು ಭಾಗ ಅರಣ್ಯ ಪ್ರದೇಶವಿದೆ. ಅಲ್ಲದೆ ಇಷ್ಟು ಅರಣ್ಯ ಪ್ರದೇಶವಿದ್ದರೂ ನಮಲ್ಲಿ ಫಲವತ್ತಾದ ಭೂಮಿಯೂ ಇದೆ. ಆದುದರಿಂದ ಇಲ್ಲಿ ಸಣ್ಣ ಪುಟ್ಟ ನೀರಾವರಿ ಯೋಜನೆಯ ಕೆಲಸಗಳನ್ನು ತೆಗೆದುಕೊಂಡರೆ ಹೆಚ್ಚು ಬೆಳೆಯನ್ನು ಬೆಳೆಯಲು ಅವಕಾಶವಾಗುತ್ತದೆ. ಹಿಂದೆ ಈ ಜಿಲ್ಲೆಯಲ್ಲಿ ಏನೋ ಕೆಲವು ಕಾರಣಗಳಿಂದಾಗಿ ಜನಸಂಖ್ಯೆಯೂ ಕಡಿಮೆಯಾಗಿ ಎಷ್ಟೋ ಜನರು ಜಮೀನನ್ನು ಸಾಗುವಳಿ ಮಾಡದೆ ಹಾಗೇ ಈಗ ಅವುಗಳು ಅರಣ್ಯ ಪ್ರದೇಶಗಳಲ್ಲಿ ಸೇರಿಕೊಂಡು ಬೇಚರಾಕ್ ಜಮೀನುಗಳಾಗಿ ಹೋಗಿವೆ. ಸರ್ಕಾರದವರು ಇದನ್ನು ಅರಣ್ಯ ಪ್ರದೇಶಗಳಿಂದ ಬಿಡಿಸಿಕೊಟ್ಟು ಸಾಗುವಳಿಗೆ ಅವಕಾಶ ಮಾಡಿಕೊಟ್ಟರೆ ಖಂಡಿತವಾಗಿ ನಮ್ಮಲ್ಲಿ ಇನ್ನೂ ಹೆಚ್ಚು ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಿದೆ. ಇದರಿಂದ ನಮ್ಮ ಸಂಸ್ಥಾನಕ್ಕೂ ಹೆಚ್ಚು ಉಪಯೋಗವಾಗುತ್ತದೆ ಎಂದು ನನಗನಿಸುತ್ತದೆ. ಹಿಂದೆ ಇದನ್ನು ಸರಿಯಾಗಿ ಪರಿಶೀಲನೆ ಮಾಡಬೇಕೆಂದು ಒಂದು ಕಮಿಟಿಯನ್ನು ನೇಮಕ ಮಾಡಿದ್ದರು. ಇಂತಹ ಕಮಿಟಿಯನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ನೇಮಿಸಿದಾಗ ದುರದೃಷ್ಟವಶಾತ್ ಈ ತಾಲ್ಲೂಕಿನಲ್ಲೇ ಕಮಿಟಿ ಮಾಡುವುದನ್ನು ಮರೆತುಬಿಟ್ಟಿದ್ದರು. ಈ ಒಂದು ತಾಲ್ಲೂಕಿನಲ್ಲೇ ಶೇಕಡ 92 ರಷ್ಟು ಅರಣ್ಯ ಪ್ರದೇಶವಿರುವಲ್ಲಿ ಈ ಕಮಿಟಿಯ ನೇಮಕ ಕೊಂಡಿರಲಿಲ್ಲ. ಆಮೇಲೆ ಇಲ್ಲೂ ಕಮಿಟಿ ಮಾಡಿ ಎಲ್ಲೆಲ್ಲಿ ಹೆಚ್ಚು ಬೆಳೆ ಮಾಡಬಹುದು ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡಿದ್ದರು. ಈ ಜಿಲ್ಲೆಯ ಬಗ್ಗೆ ಬಹಳ ಅಭಿಮಾನವಿರುವುದರಿಂದ ಇದನ್ನೆಲ್ಲಾ ಇಲ್ಲಿ ಹೇಳುತ್ತಲಿದ್ದೇನೆ ಈ ಜಿಲ್ಲೆಯಿಂದ ಈ ದೇಶಕ್ಕೆ ಬಹಳ ಉಪಯೋಗವಿದೆ. ಸರಕಾರಕ್ಕೆ ಈ ಜಿಲ್ಲೆಯಿಂದ ಸುಮಾರು ಶೇಕಡಾ ನಲವತ್ತರಷ್ಟು ಅರಣ್ಯದ ಉತ್ಪನ್ನಗಳು ಬರುತ್ತಿವೆ, ಒಂದು ಜಿಲ್ಲೆಯಿಂದಲೇ ಇಷ್ಟು ಬರುತ್ತಿರುವುದರಿಂದ ನನಗೆ ನಮ್ಮ ಜಿಲ್ಲೆಯ ಬಗ್ಗೆ ಬಹು ಅಭಿಮಾನ.

ಎರಡನೇದು, ಫಿಷರೀಸ್, ನಮ್ಮ ಸ್ಟೇಟಿನಲ್ಲಿ 200 ಮೈಲಿಗಳಷ್ಟು ಸಿ. ಕೋಸ್ಟು ಇದೆ, ಇದರಲ್ಲಿ 80 ಮೈಲಿಯಷ್ಟು ನಮ್ಮ ಜಿಲ್ಲೆಯಲ್ಲೇ ಇದೆ. ಇದಲ್ಲದೆ ಮಿನರಲ್ಸ್ ಈ ಭಾಗದಲ್ಲಿ ಸಿಗುತ್ತದೆ. ಅದರಿಂದ ನಮ್ಮ ದೇಶದ ಶೇಕಡಾ 35ರಷ್ಟು ಉತ್ಪನ್ನ ಸಿಗುತ್ತದೆ. ಅರ್‌ಕಾನಟ್ಸಿನಿಂದ ಶೇಕಡಾ 32 ರಷ್ಟು ಬರುತ್ತದೆ. ಕಾಷ್ಯೂನಟ್ಸಿನಿಂದ ಶೇಕಡಾ 35ರಷ್ಟು ಬರುತ್ತದೆ, ಬನಾನಾಸ್‌ನಿಂದ ಶೇಕಡಾ ಹತ್ತರಷ್ಟು; ಹೀಗೆ ಎಷ್ಟೋ ವಿಧವಾದ ಉತ್ಪನ್ನಗಳನ್ನು ಕೊಡುವಂತಹ ಕಾಮದೇನು ಜಿಲ್ಲೆಯಾಗಿದೆ, ನಮ್ಮ ಜಿಲ್ಲೆಗೆ ಕಾಮದೇನು ಎಂದು ಹೆಸರು ಬಂದಿದೆ. ಇದನ್ನು ಸರಕಾರದವರು ಇನ್ನೂ ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಇದರಿಂದಾಗಿ ದೇಶದ ಉತ್ಪನ್ನವೂ ಹೆಚ್ಚುತ್ತದೆ. ಇದರ ಬಗ್ಗೆ ಸರಕಾರ ಎಲ್ಲಾ ಟ್ಯಾಪ್ ಮಾಡಬೇಕೆಂದು ಸರಿಯಾದ ಒಂದು ಯೋಜನೆ ಮಾಡಿಕೊಂಡು ಮಾಡಬೇಕು ಎಂದು ತಮ್ಮ ಮುಂದೆ ಇಲ್ಲಿ ಹೇಳಬಯಸುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇನ್ನೊಂದು ಪಾರ್ಲಿಮೆಂಟರಿ ಸೆಕ್ರಟರಿಗಳನ್ನು ಫೈನಾನ್ಸ್ ಮಿನಿಸ್ಟರವರು ಮಾಡಬೇಕೆಂದು ಹೇಳುತ್ತೀರೋ ?

ಶ್ರೀ ಎಸ್. ಪಿ. ಫಾಯಿದೆ.—ಈಗ ಇಡೀ ಸ್ಟೇಟಿನಲ್ಲಿ ಸುಮಾರು 24,12,5400 ಕಿಲೋವಾಟು ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದರಲ್ಲಿ ಬರುತ್ತದೆ. ಈ ಜಿಲ್ಲೆ ಒಂದರಿಂದಲೇ ಸುಮಾರು 12,85,000 ಕಿಲೋವ್ಯಾಟುಗಳು ವಿದ್ಯುಚ್ಛಕ್ತಿ ಉತ್ಪತ್ತಿಯಾಗುವಂತಿದೆ. ಇದನ್ನು ಇನ್ನೂ ಹೆಚ್ಚು ಉಪಯೋಗ ಮಾಡಿಕೊಳ್ಳುವಂತೆ ತಕ್ಕ ಕ್ರಮವನ್ನು ಸರಕಾರದವರು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಈ ಜಿಲ್ಲೆಯಲ್ಲಿ ಇರಿಗೇಷನ್ನು ಬಗ್ಗೆ ಹೇಳುವುದಾದರೆ ಯಾವ ತರಹದ ಮೇಜರ್ ಇರಿಗೇಷನ್ನು ಪ್ರಾಜೆಕ್ಟುಗಳೂ ಇರುವುದಿಲ್ಲ. ನನ್ನ ಮುಂದೆ ಈಗ ಮಾತನಾಡಿದ ಸದಸ್ಯರು ಹೇಳಿದ ಹಾಗೆ ಸಣ್ಣ ಪ್ರಾಜೆಕ್ಟುಗಳನ್ನು ಮಾಡಿದರೆ ನಮಗೆ ಶೀಘ್ರವಾದ ಫಲ ಕೊಡುತ್ತವೆ. ಆದಷ್ಟೂ ನಮ್ಮ ಸರಕಾರದವರು ಸಣ್ಣ ಇರಿಗೇಷನ್ನು ಪ್ರಾಜೆಕ್ಟುಗಳನ್ನು ಇನ್ನೂ ಹೆಚ್ಚು ನಿಗಾ ಕೊಟ್ಟು ಅನುಕೂಲ ಮಾಡಬೇಕೆಂದು ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ನಮ್ಮ ಭಾಗದಲ್ಲಿ ಹೆಚ್ಚು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಸರಕಾರಿ ನೌಕರುಗಳಂತೆ ನಮ್ಮ ಭಾಗದಲ್ಲಿ ವಿಲೇಜ್ ಉಗ್ರಾಣಿಗಳು ಎನ್ನುವ ಒಂದು ವರ್ಗದ ಜನರಿದ್ದಾರೆ. ಇವರಿಗೆ 26 ರೂಪಾಯಿಗಳಷ್ಟು ಪಗಾರ ಕೊಡುತ್ತಿದ್ದಾರೆ. ಇದು ಎನ್. ಜಿ. ಒ. ಗಳಿಗೆ ಕೊಡುವುದಕ್ಕಿಂತಲೂ ಕಡಿಮೆಯಾದುದು. ಇವರುಗಳು ಬಹಳ ಕನಿಷ್ಟ ಮಟ್ಟದ ಜೀವನ ನಡೆಸುತ್ತಿದ್ದಾರೆ. ಸರಕಾರದವರು ಈ ನೌಕರ ಜನರ ಬಗ್ಗೆ ಸಹಾನುಭೂತಿ ತೋರಿಸಿ ಇವರುಗಳಿಗೆ ಸಹಾಯ ಮಾಡಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಎರಡನೇಯದು ನಮ್ಮಲ್ಲಿ ಉತ್ತಮವಾದ ಮಿನರಲ್ಸುಗಳು ಸಿಗುತ್ತವೆ. ಇದನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಲು ಸರಕಾರ ಆದಷ್ಟು ತೀವ್ರವಾಗಿ ತಕ್ಕ ಕ್ರಮ ತೆಗೆದುಕೊಳ್ಳಬೇಕ

(ಶ್ರೀ ಎಸ್. ಪಿ.. ಘಾಯದೆ)

ಮತ್ತು ನಮ್ಮ ಭಾಗದಲ್ಲಿ ಯಾವ ಇಂಡಸ್ಟ್ರಿ ಕೂಡ ಆಗಿಲ್ಲ. ದಾಂಡೇಲಿ ನಮ್ಮ ಭಾಗಕ್ಕೆ ಸಮೀಪದಲ್ಲಿ ಅದೆ ಇದು ಬಂಗಾರದ ಕೂಸು ಎಂದು ಹೇಳುತ್ತಾರೆ. ಇದರಿಂದ ಎಷ್ಟುಮಟ್ಟಿನ ಉಪಯೋಗ ವಾಗುತ್ತದೆ ಎನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಇಲ್ಲಿ ಯಾವ ರೀತಿಯಾದ ಇಂಡಸ್ಟ್ರಿ ಮಾಡಬಹುದು ಎನ್ನುವುದನ್ನು ತಜ್ಞರ ಅಭಿಪ್ರಾಯ ತೆಗೆದುಕೊಂಡು ಜನಗಳಿಗೆ ಉಪಯೋಗವಾಗುವಂತೆ ಮಾಡಿದರೆ ಬಹಳ ಉಪಯೋಗವಾಗುತ್ತದೆ. ಇದರ ಕಡೆಗೆ ತೀವ್ರವಾದ ಗಮನ ಕೊಡುವುದು ಅವಶ್ಯಕವಾಗಿದೆ.

ಕಡೆಯದಾಗಿ ವಾಹನ ಸೌಕರ್ಯಗಳ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ನಮ್ಮ ಭಾಗ ಮಲೆನಾಡಿಗೆ ಸೇರಿದುದು, ಇಂತಹ ಭಾಗಗಳಲ್ಲಿ ಹೆಚ್ಚು ವಾಹನ ಸೌಕರ್ಯಗಳನ್ನು ಸರಕಾರ ಕಲ್ಪಿಸಿ ಕೊಟ್ಟರೆ ನಮ್ಮ ಜನಕ್ಕೆ ಓಡಾಡಲು ಬಹಳ ಸೌಕರ್ಯ ಮಾಡಿಕೊಟ್ಟಂತಾಗುತ್ತದೆ. ಇಲ್ಲಿಗೆ ರೈಲು ಸೌಕರ್ಯ ಕೂಡ ಇಲ್ಲ. ಬಸ್ಸುಗಳೇ ವಾಹನ ಸೌಕರ್ಯ ಇದನ್ನು ಬಿಟ್ಟರೆ ಬೇರೆ ಯಾವ ವಾಹನ ಸೌಕರ್ಯವಿಲ್ಲ. ಕಾರವಾರದ ಬಗ್ಗೆ ರೈಲನ್ನು ಹಾಕುವುದರ ಕಡೆಗೆ ಸಾಕಷ್ಟು ಒತ್ತಾಯವನ್ನು ಕೇಂದ್ರದವರ ಮೇಲೆ ತಂದು ಜನಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ರೈಲ್ವೆ ಸೌಕರ್ಯಗಳು ಇಲ್ಲದೆ ಇರುವುದರಿಂದ ನಮ್ಮ ಜನರು ಎಂ. ಎಸ್. ಆರ್. ಟಿ. ಸಿ. ಬಸ್ಸುಗಳನ್ನೇ ಅವಲಂಬಿಸಬೇಕಾಗಿ ಬಂದಿದೆ. ಆದುದರಿಂದ ಈ ಭಾಗಕ್ಕೆ ಸಾಕಷ್ಟು ಬಸ್ಸುಗಳನ್ನು ಕೊಟ್ಟಿಲ್ಲ ಎಂದು ಇಲ್ಲಿ ಬಹಳ ದು:ಖದಿಂದ ತಮ್ಮ ಗಮನಕ್ಕೆ ತರಬೇಕಾಗಿದೆ, ಈ ಜಿಲ್ಲೆಯಲ್ಲಿ ಬಹಳ ಉತ್ತಮವಾದ ಮಿನರಲ್ಸ್‌ಗಳು ಸಿಗುತ್ತವೆ ಮತ್ತು ಹೆಚ್ಚು ಬೆಳೆ ಬೆಳೆಯಲು ಅವಕಾಶವೂ ಇದೆ. ಇವನ್ನೆಲ್ಲಾ ಸರಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು. ನಮ್ಮ ಜಿಲ್ಲೆಯನ್ನು ಕಾಮಧೇನು ಎಂದು ಹೇಳುತ್ತಾರೆ. ಅಂತಹ ಕಾಮಧೇನುವಾಗಿರುವ ಈ ಜಿಲ್ಲೆಯನ್ನು ಹೆಚ್ಚು ಲಕ್ಷ್ಯಪೂರೈಸಿ ರಾಜ್ಯದ ಉತ್ಪಾದನೆಯನ್ನು ಹೆಚ್ಚುವಂತೆ ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ನನ್ನ ಈ ಮಾತುಗಳನ್ನು ಮುಗಿಸುತ್ತೇನೆ. ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಎಚ್. ಆರ್. ಕೇಶವಮೂರ್ತಿ—.ಸ್ವಾಮಿ, ಈ ವರ್ಷದ ಬಜೆಟ್ಟನ್ನು ಕೇಂದ್ರ ಸರಕಾರದ ಹಣಕಾಸಿನ ಸಚಿವರಾದ ಟಿ. ಟಿ. ಕೃಷ್ಣಮಾಚಾರಿಯವರು ಒಂದು ವಿಧವಾಗಿ ಮಂಡಿಸಿದ್ದಾರೆ. ನಮ್ಮ ರಾಜ್ಯದ ಈ ವರ್ಷದ ಬಜೆಟ್ಟನ್ನು ಟಿ. ಟಿ. ಕೃಷ್ಣಮಾಚಾರಿಯಂತಿರುವ ನಮ್ಮ ಹಣಕಾಸಿನ ಸಚಿವರಾದ ಶ್ರೀ ಬಿ. ಡಿ. ಜತ್ತಿಯವರು ಇನ್ನೊಂದು ವಿಧವಾಗಿ ಮಂಡಿಸಿದ್ದಾರೆ. ಕೇಂದ್ರಸರಕಾರದ ಬಜೆಟ್ಟು ಸರ್‌ಪ್ಲಸ್ ಬಜೆಟ್ಟಾದರೆ ನಮ್ಮ ರಾಜ್ಯದ್ದು ಡೆಫಿಸಿಟ್ ಬಜೆಟ್ಟಾಗಿದೆ. 1965-66ನೇ ಇಸವಿಯಲ್ಲಿ ಲ್ಯಾಂಡ್ ರೆವೆನ್ಯೂ ಆದಾಯ ನಾಲ್ಕೂವರೆ ಕೋಟಿ ಹೆಚ್ಚುವರಿ ಮಾಡಬೇಕೆಂದು ಆಶ್ವಾಸನೆ ಕೊಟ್ಟು ಡೆಫಿಸಿಟ್ ಬಜೆಟ್ ಮಾಡಿದ್ದಾರೆ. ಆದುದರಿಂದ ಶ್ರೀಮಾನ್ ಜತ್ತಿಯವರು ಬಹಳ ಬುದ್ಧಿವಂತಿಕೆಯಿಂದ ಮಾಡಿದ ಬಜೆಟ್ಟು ಇದಾಗಿದೆ. ಅವರು ಕೂಡ ಬಹಳ ದೀರ್ಘವಾಗಿ ಯೋಚನೆಮಾಡಿ ಆರ್ಥಿಕ ಸ್ಥಿತಿ ಸುಧಾರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಮ್ಮ ದೇಶದಲ್ಲಿ ಇರತಕ್ಕಂಥ ಸಂಪನ್ಮೂಲಗಳನ್ನು ರೂಡಿಸಲು ಬೇಕಾದಷ್ಟು ಅವಕಾಶವಿದೆ. ಇಷ್ಟು ಅವಕಾಶವಿದ್ದರೂ ಕೂಡ ಆಳುವ ಪಕ್ಷದವರು ಒಂದು ತಾತ್ವಿಕ ದೃಷ್ಟಿಯಿಂದ ಅದಕ್ಕೆ ಅವಕಾಶ ಕೊಡುತ್ತಿಲ್ಲ. ಇರತಕ್ಕಂಥ ಸಂಪನ್ಮೂಲ ರೂಢಿಸುವುದು ನಮಗೆ ಇಷ್ಟವಿದ್ದರೂ ಕೂಡ ಅದು ಕುಂಠಿತವಾಗಿದೆ. ಇದಕ್ಕೋಸ್ಕರ ನಾನು ಹೇಳುವುದು ಏನೆಂದರೆ, ಇವತ್ತಿನ ದಿವಸ ಪ್ರೊಹಿಬಿಷನ್ ಸ್ಕ್ರ್ಯಾಪ್ ಮಾಡಿದರೆ ರಾಜ್ಯದ ಬೊಕ್ಕಸಕ್ಕೆ 15 ಕೋಟಿ ರೂಪಾಯಿ ಬರುತ್ತದೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಇರತಕ್ಕ ಪೋರ್ಟ್ಸ್ ಡೆವಲಪ್‌ಮೆಂಟ್ ಮಾಡಿದರೆ ಕಸ್ಟಮ್ಸ್ ಕೋಟ್ಯಾನು ಕೋಟಿ ರೂಪಾಯಿ ಬರುತ್ತದೆ. ಬಂದರುಗಳನ್ನು ಅಭಿವೃದ್ಧಿಗೊಳಿಸಬೇಕಾಗಿದೆ. ವಿದ್ಯುತ್‌ಶಕ್ತಿ ಉತ್ಪಾದನೆಗಾಗಿ ಶರಾವತಿ ಯೋಜನೆಗೆ ಇನ್ನೂ 50-60 ಕೋಟಿ ಬೇಕಾಗುತ್ತದೆ. ಇದಲ್ಲದೆ ಇನ್ನೂ ಅನೇಕ ಯೋಜನೆಗಳಿವೆ. ಕಾಳಿ ನದಿ ಯೋಜನೆಗೆ ನೂರು ಕೋಟಿಯಾಗುತ್ತದೆ. ಇವುಗಳನ್ನು ಸ್ವಲ್ಪ ನಿಧಾನಮಾಡಿ ಆದಷ್ಟು ಶೀಘ್ರದಲ್ಲಿ ಪೋರ್ಟ್ ಡೆವಲಪ್‌ಮೆಂಟ್ ಮಾಡಿದರೆ ಹತ್ತಾರು ಕೋಟಿ ರೂಪಾಯಿ ನಿರಾಯಾಸವಾಗಿ ಸಂಪಾದನೆ ಮಾಡಬಹುದು. ಅದೇ ರೀತಿಯಾಗಿ ದೊಡ್ಡ ನೀರಾವರಿ ಪ್ರೊಜೆಕ್ಟ್ ಪ್ರದೇಶದಲ್ಲಿ ರೈತರು ನೀರನ್ನು ತೆಗೆದು ಕೊಂಡು ಸಾಕಷ್ಟು ಕಂದಾಯ ಕೊಡುತ್ತಾ ಇಲ್ಲ. ಈ ರೀತಿ ಸರಕಾರಕ್ಕೆ ಬರಬೇಕಾದ ಕೋಟ್ಯಾನು ಕೋಟಿ ರೂಪಾಯಿ ಪೋಲು ಅಂದರೆ ಲೀಕೇಜ್ ಆಫ್ ರೆವಿನ್ಯೂ ಆಗುವುದನ್ನು ತಡೆಗಟ್ಟಬೇಕಾಗಿದೆ. ಇದೇ ರೀತಿ ದೇಶಾದ್ಯಂತ ಚೆನ್ನಾಗಿರುವ ಲಕ್ಷಣವಾದ ಅಮೃತ ಮಹಾಲ ಕಾವಲು ಬಂಜರು ಭೂಮಿಯಾಗಿದೆ. ಅನೇಕ ಕಡೆ ಫಾರೆಸ್ಟ್ ಲ್ಯಾಂಡ್ ಅನ್-ಆಥರೈಜ್ಡ್ ಕಲ್ಟಿವೇಷನ್ ಮಾಡಿಕೊಂಡಿರುವುದರಿಂದ ಇದರಿಂದ ಸರಕಾರಕ್ಕೆ ಬರಬೇಕಾದ ಎಷ್ಟೋ ಕೋಟಿ

ರೂಪಾಯಿ ಲುಕ್ಸಾನವಾಗುತ್ತದಲ್ಲವೇನು ? ಅಂಥ ಜಮೀನು ಹರಾಜು ಹಾಕಿದರೆ ಅದರ ಬೆಲೆ ಬರುತ್ತದೆ. ಇದನ್ನು ಮಾಡದೇ ಇರುವುದಕ್ಕೆ ಕಾರಣವೇನು ? ಸರಕಾರ ಅನುಸರಿಸುತ್ತಿರುವ ಲ್ಯಾಂಡ್ ಗ್ರ್ಯಾಂಟ್ ಪಾಲಿಸಿ ಕೂಡ ಅದೊಂದು ಮುಖ್ಯ ಕಾರಣವಾಗಿದೆ. ದೇಶದಲ್ಲಿ ಸಂಪನ್ಮೂಲ ಬೇಕಾದಷ್ಟು ಇದ್ದರೂ ಕೂಡ ಅದನ್ನು ರೂಢಿಸಲು ಸರಕಾರ ಉಪೇಕ್ಷೆಮಾಡಿ ಕೋಟ್ಯಾನು ಕೋಟಿ ರೂಪಾಯಿ ಆದಾಯವನ್ನು ಬಿಟ್ಟುಕೊಟ್ಟು ಬಡ ಜನರ ಮೇಲೆ ಕಂದಾಯದ ಹೊರೆ ಹಾಕುತ್ತಿದ್ದೀರಿ. ಇದನ್ನು ಸರಕಾರ ಆಲೋಚನೆ ಮಾಡಬೇಕು. ಲ್ಯಾಂಡ್ ರೆವಿನ್ಯೂ ಸೆಟಲ್‌ಮೆಂಟ್ ಮೂಲಕ ರೈತನಿಂದ ನಾಲ್ಕೂವರೆ ಕೋಟಿ ಬರುತ್ತದೆಂದು ತೋರಿಸುತ್ತೀರಿ. ಹಿಂದಕ್ಕೆ ತೋರಿಸಿದ ಬಿಲ್ಡಿಂಗ್ ಟ್ಯಾಕ್ಸ್‌ನಿಂದ 30 ಕೋಟಿಯಾಗುತ್ತಿತ್ತು, ಆದೇ ರೀತಿ ಇದೂ ಕೂಡ 25 ಕೋಟಿಗೆ ಕಡಿಮೆಯಿಲ್ಲದೆ ರೈತನ ಮೇಲೆ ಹೊರೆ ಬೀಳುತ್ತದೆ. ಶ್ರೀ ಜತ್ತಿಯವರು ಇದನ್ನು ಯೋಚನೆಮಾಡಿ ನೋಡಬಹುದು. ತೆರಿಗೆಯ ಹೊರೆ ಹೊರುವುದಕ್ಕೆ ಸಾಮರ್ಥ್ಯವಿರುವವರ ತಲೆಯ ಮೇಲೆ ಭಾರ ಹೇರಲಿ, ಆದರೆ ಹೊರೆ ಹೊರಲಾರದಂಥ ಬಡವರನ್ನು ಹಿಂಸೆ ಪಡಿಸುವುದು ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ ರಚನೆ ಮಾಡುವ ನೀತಿಗೆ ಅನುಗುಣವಾಗಿ ಆಗುವುದಿಲ್ಲ.

ಇನ್ನು ಪ್ಲಾನಿಂಗ್ ವಿಷಯದಲ್ಲಿ ಹೇಳುವುದಾದರೆ, ಇದು ಡಿಫೆಕ್ಟಿವ್ ಪ್ಲಾನಿಂಗ್ ಇದೆ. ಸೆಂಟರಿನ ಪ್ಲಾನಿಂಗ್ ತೆಗೆದುಕೊಂಡರೂ ಕೂಡ ಸೆಂಟ್ರಲ್ ಪ್ಲಾನಿಂಗ್‌ನಲ್ಲಿ ಅವರು ಅಗ್ರಿಕಲ್ಚರ್ ಸೈಡ್ ಕಂಪ್ಲೀಟ್ ಆಗಿ ನೆಗ್ಲೆಕ್ಟ್ ಮಾಡಿದ್ದಾರೆ. ನಮ್ಮ ಸ್ಟೇಟ್‌ನಲ್ಲಿ ಕೂಡ ಇದನ್ನು ನೆಗ್ಲೆಕ್ಟ್ ಮಾಡಿದ್ದಾರೆ. ರಷಿಯಾ ದೇಶದಲ್ಲಿ ಪ್ಲಾನಿಂಗ್ ಮುಂದುವರಿಸಿದ ಹಾಗೆ ಇಲ್ಲಿಯೂ ಮಾಡುವುದಾದರೆ ನಮ್ಮ ದೇಶ ಸರ್ವತೋ ಮುಖ ಅಭಿವೃದ್ಧಿಗೆ ಬರುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ರೈತನಿಗೂ ಅನುಕೂಲವಾಗುತ್ತದೆ, ಇದನ್ನು ನೆಗ್ಲೆಕ್ಟ್ ಮಾಡುವುದು ಸರಿಯಲ್ಲ. ಇದಲ್ಲದೆ ನಮ್ಮ ಸ್ಟೇಟಕ್ಕೂ ಇನ್ನೊಂದು ಸ್ಟೇಟಕ್ಕೂ ಪ್ಲಾನಿಂಗ್‌ನಲ್ಲಿ ಕೋ-ಆರ್ಡಿನೇಷನ್ ಇಲ್ಲ. ಮನಸ್ಸಿಗೆ ಬಂದಂತೆ ಪ್ಲಾನಿಂಗ್ ಮಾಡುತ್ತಿದ್ದಾರೆ. ಒಬ್ಬರಿಗೊಬ್ಬರಿಗೆ ಕೋ-ಆರ್ಡಿನೇಷನ್ ಇಲ್ಲ. ಸ್ಟೇಟ್ ಸೈಡ್ ಮೀನ್ಸ್ ಆಫ್ ಪ್ರೊಡಕ್ಷನ್ ಇವು ಬಹಳ ಪ್ರಾಮುಖ್ಯವಾದವುಗಳಾಗಿವೆ. ನೆಂಟರು ಸೈಡ್ ನೋಡಿಕೊಂಡು ಇಂಡಸ್ಟ್ರೀಜ್ ವಹಿಸಿಕೊಂಡು ಕೆಲಸ ಮಾಡುವುದು ಅವರ ಕರ್ತವ್ಯವಾಗಿದೆ. ಅವರವರ ಯೋಗ್ಯತೆ ಎಷ್ಟು ಇದೆಯೋ ಅದಕ್ಕೆ ತಕ್ಕಂತೆ ಶರಾವತಿ ಯೋಜನೆಯಿಂದ ಉತ್ಪತ್ತಿಯಾಗುವ ವಿದ್ಯುತ್ ಶಕ್ತಿಯನ್ನು ನಾವು ಯಾವರೀತಿ ಇಂಡಸ್ಟ್ರೀಸ್ ಡೆವಲಪ್ ಮಾಡುವುದಕ್ಕೆ ಉಪಯೋಗಿಸಬೇಕು ಎನ್ನುವುದಕ್ಕೆ ಗಮನಕೊಟ್ಟು ಯೋಚನೆ ಮಾಡಬೇಕಾದುದು ಅಗತ್ಯ ಎಂದು ಹೇಳಬಯಸುತ್ತೇನೆ. ಸೋಷಿಯಲಿಸ್ಟಿಕ್ ತತ್ವ ಅಂಗೀಕರಿಸಿರುವ ಸರಕಾರ ಇರುವಾಗ್ಗೆ ದೇಶದಲ್ಲಿಯ ಬಂಡವಾಳ ಸರಿಯಾಗಿ ವಿತರಣೆ ಯಾಗಬೇಕು. ಗ್ರಾಮಾಂತರ ಪ್ರದೇಶಕ್ಕೆ ವಿದ್ಯುತ್‌ಶಕ್ತಿ ಪೂರೈಸುವುದಕ್ಕೆ ಇಂದು ಸರಕಾರಕ್ಕೆ ದುಡ್ಡು ಬೇಕಾಗಿದೆ. ಇದನ್ನು ಸರಕಾರ ಆಲೋಚನೆ ಮಾಡಿದ್ದಾರೆಯೇ ? ಶರಾವತಿ ಯೋಜನೆಯಲ್ಲಿ ಉತ್ಪತ್ತಿಯಾಗುವ ವಿದ್ಯುತ್ ಶಕ್ತಿಯನ್ನು ಸಂಪೂರ್ಣವಾಗಿ ಕೊನೆಯ ಕಿಲೋವ್ಯಾಟ್ ವರೆಗೆ ದೇಶದಲ್ಲೆಲ್ಲಾ ಉಪಯೋಗಿಸುವುದಕ್ಕೆ ಐದಾರು ನೂರು ಕೋಟಿ ರೂಪಾಯಿ ಬೇಕಾಗುತ್ತದೆ. ಇದಕ್ಕೆ ದುಡ್ಡು ಎಲ್ಲಿದೆ ! ಇದರಿಂದ ಏನು ತಿಳಿದು ಬರುತ್ತದೆ ಅಂದರೆ ಇಂಥ ದೊಡ್ಡ ಯೋಜನೆ ಪ್ಲಾನಿಂಗ್ ಡಿಫೆಕ್ಟಿವ್ ಆಗಿದೆ ಎಂದು ಕಂಡು ಬರುತ್ತದೆ. ಸಾವಿರಾರು ಕೋಟಿ ರೂಪಾಯಿ ಯೋಜನೆಗಳಿಗೆ ಯಾವ ರೀತಿ ಕೇಂದ್ರ ಸರಕಾರವನ್ನು ಅಪ್ರೋಚ್ ಮಾಡಿ ಅವರಿಂದ ದುಡ್ಡು ಪಡೆದುಕೊಂಡು ದೇಶಕ್ಕೆ ಹೇಗೆ ಅನುಕೂಲ ಮಾಡಿ ಕೊಡಬೇಕು ಎನ್ನುವುದಕ್ಕೆ ಖಂಡಿತವಾಗಿ ಯೋಚನೆ ಮಾಡಿಲ್ಲ. ಒಂದು ಉದಾಹರಣೆ ಹೇಳುವುದಾದರೆ ಅಮೇರಿಕಾ ದೇಶದಲ್ಲಿ ಇಂಥ ಒಂದು ದೊಡ್ಡ ಯೋಜನೆಯನ್ನು ಟೆನಸಿ ವ್ಯಾಲಿಯಲ್ಲಿ ಮಾಡಿದ್ದಾರೆ. ಇಂಥ ದೊಡ್ಡ ಪ್ರೊಜೆಕ್ಟ್ ತೆಗೆದುಕೊಳ್ಳುವಾಗ್ಗೆ ಅಮೆರಿಕಾ ಸರಕಾರದವರು ಒಂದು ಲಾ ಪಾಸು ಮಾಡಿದರು. ಇದರ ಬಗ್ಗೆ ಅವರು ಹೀಗೆ ಹೇಳುತ್ತಾರೆ :

In Washington in April, 1933, President Franklin D. Roosevelt sent a historic message to the Uuited States Congress :

"The continued idleness of a great national investment in the Tennessee Valley leads me to ask the Congress for legislation necessary to enlist this project in the service of the people."

This legislation recognised that the various natural resources of the Tennessee Valey could be tools for economic growth, but that no one tool could be used effectively without progress on other resources at the same time. Instead of separate efforts in different directions-hydro-

electric power here, soil conservation there-it proposed a planned, unified effort combining all these resource-development tools. Never before had such a river basin development programme been undertaken."

ನಾನು ತಮಗೆ ಹೇಳುವುದಿಷ್ಟೆ:

Mr. DEPUTY SPEAKER.—Please quote the authority.

Sri H. R. KESHAVA MURTHY.—30 years of American Social and Economic Progress.

5-00 P.M.

ಆ ಟಿನಿಸಿ ವ್ಯಾಲಯು ಪ್ರದೇಶವೂ ಕೂಡ ಮೊದಲು ಬಹಳ ಬ್ಯಾಕ್ವರ್ಡಾಗಿತ್ತು. ಆಗ ಅವರು ಅಲ್ಲೇನು ಮಾಡಿದರೆಂಬುದನ್ನು ನೋಡಿ. "For the isolated farm families near Norris Dam as elsewhere, this power programme had striking results. First it meant light: sundown was no longer the end of the day. It meant refrigeration instead of milk that soured and food that spoiled. It meant electric pumps and water from faucets instead of carrying heavy pails from the spring and electric stoves instead of finding and chopping stovewood. Electricity meant release from much drudgery in cooking, cleaning the home, and washing clothing, plus a new window on the world through radio and, later, television."

ಶ್ರೀ ಬಿ. ಡಿ. ಜತ್ತಿ.—ಮನೆಯಲ್ಲಿ ಅಡಿಗೆ ಮಾಡುವುದಕ್ಕೆ ಹೆಣ್ಣು ಮಕ್ಕಳೇನೂ ಬೇಡ ಅಂತ ಹೇಳಲಿಲ್ಲವಲ್ಲಾ ?

ಶ್ರೀ ಎಚ್. ಆರ್. ಕೇಶಮೂರ್ತಿ.—ಅಲ್ಲಿಯ ಜನರು ಬಂಡವಾಳಗಾರರಲ್ಲ, ಇಲ್ಲಿಯವರ ಹಾಗೆ ಇಲ್ಲಿ ಈ ದಿವಸ ಬೆಂಗಳೂರಿಂದ ಹಿಡಿದು ನೆಲಮಂಗಲದವರೆಗೂ ಈಗಾಗಲೇ ಜಮೀನುಗಳನ್ನು ಈ ಕೈಗಾರಿಕೆಗಾಗಿ ಹಿಡಿದುಕೊಂಡಿದ್ದಾರೆ. ಇವರೆಲ್ಲರೂ ಬ್ಯೂರಾಕ್ರಟಿಕ್ ಜನರು ಕ್ಯಾಪಿಟಲಿಸ್ಟಗಳು...

ಶ್ರೀ ಬಿ. ಡಿ. ಜತ್ತಿ.—ಬೀದಿಯಲ್ಲಿ ಬಂದರೆ ಅವರು ಮಾತನಾಡಿಸುವುದಿಲ್ಲ.........

ಶ್ರೀ ಎಚ್. ಆರ್. ಕೇಶವಮೂರ್ತಿ.—ಅದುದರಿಂದ ನನ್ನ ಸಲಹೆ ಏನೆಂದರೆ ಇಲ್ಲಿ ಇದರ ಪ್ರೈವೇಟನ್ನು ಕ್ಯಾಪಿಟಲಿಸ್ಟಗಳ ಕೈಗೆ ಕೊಡಬೇಡಿ, ಸರ್ಕಾರದವರೇ ಒಂದು ರಿವರ್ ಬೋರ್ಡ್ ಅಂತ ಮಾಡಿ ಅದನ್ನು ಸರ್ಕಾರದವರೇ ಮ್ಯಾನೇಜ್ ಮಾಡಿದರೂ ಪರವಾ ಇಲ್ಲ, ಹೇಗೆ ಮಾಡಿದರೆ ಅನುಕೂಲ ವಾಗುತ್ತದೆ. ಹೀಗೆ ಮಾಡುವುದಕ್ಕೆ ಅವಕಾಶವೂ ಇದೆ. ಈ ರೀತಿ ಇಲ್ಲಿ ಮಾಡಬೇಕೆಂದು ನಾನು ತಮಗೆ ಹೇಳುತ್ತಿದ್ದೇನೆ. ಹೀಗೆ ಈ ಪ್ಲಾನಿಂಗ್‌ನ ವಿಚಾರದಲ್ಲೂ ತಾವು ಆಲೋಚನೆ ಮಾಡಿ ಬಡವರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಆಹಾರದ ಸಮಸ್ಯೆ ವಿಚಾರದಲ್ಲಿ ಈಗಾಗಲೇ ಅನೇಕರು ಮಾತನಾಡಿದ್ದಾರೆ. ಆದರೆ ನಾವೆಲ್ಲರೂ ಹೀಗೆ ಬರಿಯ ಒಂದು ಸ್ಲೋಗನ್ ಹೇಳಿಕೊಂಡು ಕುಳಿತ್ತಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಜಮೀನುಗಳೆಲ್ಲಾ ರೈತನ ಹತ್ತಿರ ಎಷ್ಟು ದಿವಸ ಬಿದ್ದಿದ್ದರೂ ಅದರಿಂದೇನೂ ಪ್ರಯೋಜನವಿಲ್ಲ. ಚೈನಾ ದೇಶದಲ್ಲೂ ಹೀಗೇ ಇತ್ತು. ಅಲ್ಲಿ ಆ ಜನರಿಂದ ಅವರು ಜಮೀನನ್ನೆಲ್ಲಾ ಕಿತ್ತುಕೊಂಡು ಪ್ರತಿಯೊಬ್ಬರಿಗೂ ಹನ್ನೆರಡನೆಯ ಐದು ಭಾಗ ಜಮೀನು ಇರುವಂತೆ ಮಾಡಿದ್ದಾರೆ. ಅಲ್ಲಿ ಪ್ರತಿಯೊಂದು ಸಂಸಾರಕ್ಕೂ ಈ ದಿವಸ ಜಮೀನು ಇಟ್ಟಿರುತ್ತದೆ. ಆದರೆ ರಷ್ಯಾದಲ್ಲೂ ಮತ್ತು ಅಮೆರಿಕಾ ದೇಶಗಳಲ್ಲೂ ಹೇಗೆ ಮಾಡಿದ್ದಾರೆಂದರೆ: ಅಲ್ಲಿರತಕ್ಕ ಜಮೀನನ್ನೆಲ್ಲಾ ನಾಷನಲೈಷ್ ಮಾಡಿ ಆದನ್ನೆಲ್ಲಾ ಮ್ಯಕನೈಜ್ ಮಾಡಿದ್ದಾರೆ. ಅ ್ಟೇ ಅಲ್ಲ—ಅಲ್ಲಿ ಅಮೆರಿಕಾ ದೇಶದಲ್ಲಿ ರೈತರಿಗೆ ಬೇಕಾದಂಥ ಬಿತ್ತನೆ ಬೀಜ, ಗೊಬ್ಬರ ಮತ್ತು ರೋಗಾದಿಗಳನ್ನು ತಡೆಗಟ್ಟತಕ್ಕ ಔಷಧಿಗಳು ಮತ್ತು ಇತರ ಈ ಸಂಬಂಧಪಟ್ಟ ಎಲ್ಲಾ ಸಾಮಾಗ್ರಿಗಳನ್ನೂ ಒದಗಿಸಿಕೊಟ್ಟಿರುತ್ತಾರೆ. ಹೀಗಾದುದರಿಂದಲೇ ಈ ದಿವಸ ಅಲ್ಲಿ ಜಿಮೀನಿನಲ್ಲಿ ಉತ್ಪತ್ತಿ ಜಾಸ್ತಿಯಾಗಿದೆ. ಅಲ್ಲಿ ಕೇವಲ 100ಕ್ಕೆ 8 ಜನರು ವ್ಯವಸಾಯದಲ್ಲಿ ತೊಡಗಿದ್ದರೂ ಆ ಒಬ್ಬ ಮನುಷ್ಯ ಬೆಳೆಯುತಕ್ಕದ್ದನ್ನು ಆತನೂ ಬಳಸಿ ಆತ ಇನ್ನೂ 24 ಜನರಿಗೆ ಸಹಾಯ ಮಾಡಬಲ್ಲನಂತೆ, ಆಹಾರ ಸಾಮಾಗ್ರಿಗಳನ್ನು ಒದಗಿಸಬಲ್ಲನಂತೆ. ನಾವು ಇಲ್ಲಿ ಆ

ಪರಿಸ್ಥಿತಿಗೆ ಬರುವುದು ಯಾವಾಗ ? ಇದನ್ನು ಸರ್ಕಾರದವರು ಆಲೋಚನೆ ಏಕೆ ಮಾಡಲಿಲ್ಲ ? ಇಷ್ಟೇ ಅಲ್ಲ, ರೈತರಿಗೆ ಸಾಲ ಕೊಡತಕ್ಕ ವಿಚಾರವನ್ನೂ ಹೇಳುತ್ತೇನೆ. ಅಲ್ಲಿಯ ರೈತರಿಗೆ 6 ಸಾವಿರ ಮಿಲಿಯನ್ ಡಾಲರುಗಳನ್ನು ಸಾಲವಾಗಿ ಕೊಟ್ಟಿದ್ದಾರೆ. ಇಲ್ಲಿ 100 ರೂಪಾಯಿ ತಗಾವಿ ಸಾಲ ತೆಗೆದುಕೊಳ್ಳಬೇಕಾದರೆ ಪ್ರಾಣಗಳೇ ಹೋಗುತ್ತವೆ. ಅಲ್ಲಿ ರೈತರಿಗೆ ಸಾಲ ಕೊಡಬೇಕಾದರೆ ಸರ್ಕಾರದವರು ಜಮೀನು ಆಧಾರವನ್ನು ಕೇಳುವುದಿಲ್ಲವಂತೆ. ಅಲ್ಲೇನಿದ್ದರೂ ರೈತನಾದವನು ವ್ಯವಸಾಯದಲ್ಲಿ ತೊಡಗಿದ್ದಾನೆಯೇ ಇಲ್ಲವೇ, ಮತ್ತು ಅತನು ಸತ್ಯವಂತನೇ ಅಲ್ಲವೇ, ಅವನು ವ್ಯವಸಾಯಗಾರನೇ ಅಲ್ಲವೇ ಎಂಬುದನ್ನು ನೋಡಿ ಸಾಲ ಕೊಡುತ್ತಾರೆ. ಹೀಗೆ ಅಲ್ಲಿ ಒಂದು ಸೋಷಿಯಲ್ ಸಕ್ಯೂರ್ಟಿ ಮೇಲೆ ಸಾಲ ಕೊಡತಕ್ಕ ಪದ್ಧತಿ ಇದೆ. "More than 140 million Americans are protected by the Social Security Act. Workers and employers contribute equal though small amounts of money into a separate trust fund in the U. S. Treasury. A worker may retire as early as the age of 62 with a pension for the remainder of his life. The system provides death benefits for widows along with funds for dependent children. In case of the worker's death, Social Security provides a lump-sum benefit to his family, *plus* monthly payments to his widow." ಆದರೆ ಇಲ್ಲಿ ಓಲ್ಡ್ ಏಜ್ ಪೆನ್‌ಷನ್ ಬಿಟ್ಟರೆ ಏನಿದೆ ? ಇನ್ನು ಸರ್ಕಾರಿ ನೌಕರರ ವಿಷಯದಲ್ಲಿ ಇಲ್ಲಿಯ ವರೆಗೂ ತಾವೇನು ಒಂದು ಸಮಾಧಾನಕರವಾದ ಜವಾಬನ್ನು ಕೊಟ್ಟಿದ್ದೀರಿ ? ಹೀಗೇ ಸರ್ಕಾರ ದವರು ಎಲ್ಲಿಯವರೆಗೆ ಅತೃಪ್ತಿ ಹೊಂದಿದ ನೌಕರರನ್ನಿಟ್ಟುಕೊಂಡು ಕೆಲಸಮಾಡಿಸುತ್ತಾರೋ ಅಲ್ಲಿಯ ವರೆಗೂ ದೇಶಕ್ಕೂ ಸುಖವಿಲ್ಲ, ಸರ್ಕಾರಕ್ಕೂ ಪ್ರಯೋಜನವಿಲ್ಲ ಎಂಬ ಮಾತನ್ನು ನಾನು ಖಚಿತವಾಗಿ ತಿಳಿಸುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ನಾವೂ ಹೇಳಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ತಾವು ಮಾಡಿರತಕ್ಕ ಭಾಷಣವನ್ನು ನಾನೂ ಕೇಳಿದ್ದೇನೆ. ತಾವು ಇಂಥ ತಾರೀಖು ಸಂಬಳಗಳನ್ನು ಜಾಸ್ತಿಮಾಡುತ್ತೇವೆ ಎಂದು ಹೇಳಿ, ಆಗ ನಾನು ತಮ್ಮ ಮಾತನ್ನು ನಂಬುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಎರಡು ಮಾತನ್ನು ಹೇಳಬೇಕೆಂದಿದ್ದೇನೆ. ನಮ್ಮ ಶ್ರೀಮಾನ್ ಕಂಠಿಯವರು ಹೇಳಿಕೆಗಳ ಮೇಲೆ ಹೇಳಿಕೆಗಳನ್ನು ಕೊಡುತ್ತಲೇ ಇದ್ದಾರೆ. ಆದರ ಒಂದಕ್ಕೊಂದು ಸಂಬಂಧವೇ ಇರುವುದಿಲ್ಲ. ಅವರು ಪ್ರಾಥಮಿಕ ಶಾಲೆಯ ಉಪಾಧ್ಯಾಯರಿಗೆ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 100 ರೂಪಾಯಿಗಳ ಸಂಬಳವನ್ನೂ ಮತ್ತು ಸೆಕೆಂಡರಿ ಶಾಲೆಗಳ ಉಪಾಧ್ಯಾಯರಿಗೆ 200 ರೂಪಾಯಿಗಳ ವೇತನವನ್ನೂ ಕೊಡಲಾಗುವುದೆಂದು ಹೇಳಿಕೆ ಗಳನ್ನು ಹೊರಡಿಸಿದ್ದಾರೆ. ಆದರೆ ಈಗ ಸರ್ಕಾರಕ್ಕೆ ಕೇವಲ 5 ರೂ.ಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲದಿರುವಾಗ ಮುಂದೆ ಇವರು 100-200 ರೂಪಾಯಿಗಳ ಸಂಬಳಗಳನ್ನು ಕೊಡುತ್ತಾರೆಂದರೆ ಯಾರು ನಂಬುತ್ತಾರೆ ? ಆಂಧ್ರದಲ್ಲಿ ಈಗಾಗಲೇ ಸೆಕೆಂಡರಿ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡುತ್ತಿದ್ದಾರೆ. ಖಾಸಗಿಯವರಿಗೆ ಈ ಸೆಕೆಂಡರಿ ಶಾಲೆಗಳನ್ನು ಕೊಡುವುದರ ಬದಲು ಸರ್ಕಾರದವರೇ ಅವುಗಳನ್ನೂ ವಹಿಸಿಕೊಂಡರೆ ಆದರಿಂದ ಸರ್ಕಾರಕ್ಕೆ ಖರ್ಚು ಇನ್ನೂ ಕಡಮೆ ಯಾಗುವುದೆಂದು ಶ್ರೀ ಅಪ್ಪಣ್ಣನವರು ಹೇಳಿದ್ದಾರೆ. ಆದುದರಿಂದ ಇನ್ನು ಮುಂದಕ್ಕಾದರೂ ಈ ಸೆಕೆಂಡರಿ ಶಾಲೆಗಳನ್ನು ಸರ್ಕಾರದವರೇ ವಹಿಸಿಕೊಂಡು ಮಕ್ಕಳಿಗೆ ಸೆಕೆಂಡರಿ ಎಜುಕೇಷನನ್ನು ಉಚಿತವಾಗಿ ಕೊಡುವಂತೆ ಮಾಡಬೇಕೆಂದು ಹೇಳುತ್ತೇನೆ. ಈ ದಿವಸ ಈ ಸೆಕೆಂಡರಿ ಶಾಲೆಗಳನ್ನು ನಡೆಸುವುದಕ್ಕಾಗಿ ತಾವು ತಾಲ್ಲೂಕ್ ಬೋರ್ಡಿಗೋ ಅಥವಾ ಇನ್ನಾರಿಗೋ ಕೊಟ್ಟರೆ ಅಲ್ಲೇ ಒಂದು ಪಾಲಿಟಿಕ್ಸ್ ಪ್ರಾರಂಭವಾಗುತ್ತದೆ. ಯಾವ ಪಕ್ಷದವರು ಶಾಲೆಯನ್ನು ಪ್ರಾರಂಭಿಸಿದರೆ ಅವರ ಕಡೆಗೇ ಹುಡುಗರೂ ಸಹಾ ಸೇರತಕ್ಕ ಸಂಭವವುಂಟು. ಇದನ್ನು ಸರ್ಕಾರದವರೇ ವಹಿಸಿಕೊಂಡರೆ ಈ ತೊಂದರೆಯೇ ಇರುವುದಿಲ್ಲ. ಇಂಥ ಶಾಲೆಗಳಲ್ಲಿ ಅಭ್ಯಾಸ ಮಾಡತಕ್ಕ ಹುಡುಗರಿಗೆ ಒಂದು ಫ್ರೀ ಮೈಂಡ್ ಬರುವ ಹಾಗೆ ಮಾಡಬೇಕು. ಮುಂದೆ ಅವರು ಪಾಲಿಟಿಕ್ಸ್‌ನಲ್ಲಿ ಯಾವ ನಿಲುವನ್ನಾ ದರೂ ತೆಗೆದುಕೊಳ್ಳಲಿ. ಅಭ್ಯಾಸಮಾಡತಕ್ಕವರಿಗೆ ಇಂಥ ಒಂದು ಅವಕಾಶವಿರುವಂತೆ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹೌಸಿಂಗ್ ವಿಚಾರಕ್ಕೆ ಬಂದರೆ-ಸರ್ಕಾರದವರು ಇದನ್ನು ಸರಿಯಾಗಿ ಟ್ಯಾಕಲ್ ಮಾಡಿಲ್ಲ ವೆಂದು ಹೇಳುತ್ತೇನೆ. ಈ ಹೌಸಿಂಗ್ ಬಾಬಿಗೆ ಸರ್ಕಾರದವರೇನೋ ಬಹಳ ಹಣವನ್ನು ಕೊಟ್ಟಿ ದ್ದಾರೆ, ಆದರೆ ಇದಕ್ಕೆ ಸರಿಯಾದ ಒಂದು ಪ್ಲಾನಿಂಗ್ ಇಲ್ಲ. ಈ ಬಾಬಿನಲ್ಲಿ ಸ್ವಲ್ಪ ಮಿತವ್ಯಯದಿಂದ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಕೆಲಸ ಮಾಡಿದರೆ ಅನೇಕರಿಗೆ ಅನುಕೂಲವಾಗುತ್ತದೆ. ಈ ಮನೆಗಳನ್ನು ನಿರ್ಮಾಣ ಮಾಡತಕ್ಕ ವಿಚಾರದಲ್ಲಿ ಪ್ರೀ ಫ್ಯಾಬ್ರಿಕೇಟೆಡ್ ಬಿಲ್ಡಿಂಗುಗಳನ್ನು ಹಾಕಿದರೆ ಖರ್ಚು ಕಡಮೆ ಆಗುತ್ತದೆ, ಮನೆಗಳು ಜಾಸ್ತಿಯಾಗುತ್ತವೆ. ಇದರಿಂದ ವಸತಿ ಸೌಕರ್ಯವಿಲ್ಲದೆ ಬಹಳ ಹಣ ಅಪವ್ಯಯವಾಗುತ್ತಿದೆ. ಹಾಲಿ ಅನುಸರಿಸತಕ್ಕ ಪದ್ಧತಿಯಲ್ಲಿ ಹೆಚ್ಚು ಮನೆಗಳನ್ನು ಕಟ್ಟಿಸುವುದಕ್ಕಾಗುವುದಿಲ್ಲ. ಆದುದರಿಂದ ಇನ್ನು ಮುಂದಕ್ಕಾದರೂ ಪ್ರೀ ಫ್ಯಾಬ್ರಿಕೇಟೆಡ್ ಹೌಸುಗಳನ್ನು ಕಟ್ಟಿಸಿ ಹೆಚ್ಚು ಜನರಿಗೆ ಸಹಾಯ ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಪ್ರಸಕ್ತ ಸಾಲಿನ ಆಯವ್ಯಯ ಪಟ್ಟಿಯನ್ನು ಮಂಡಿಸುತ್ತಾ ನಮ್ಮ ಸರ್ಕಾರ ರಾಜ್ಯದ ಪ್ರಗತಿಯನ್ನು ಎಷ್ಟರ ಮಟ್ಟಿಗೆ ಸಾಧಿಸಿದೆ ಎಂಬುದನ್ನೆಲ್ಲಾ ನಮ್ಮ ಹಣಕಾಸಿನ ಮಂತ್ರಿಗಳಾದ ಶ್ರೀ ಬಿ. ಡಿ. ಜತ್ತಿಯವರು ಸವಿಸ್ತಾರವಾಗಿ ಸಭೆಯ ಮುಂದೆ ಇಟ್ಟಿದ್ದಾರೆ.

ನಮ್ಮ ರಾಜ್ಯ ಸರ್ಕಾರ ವಿವಿಧ ರಂಗಗಳಲ್ಲಿ ಪ್ರಗತಿಯನ್ನು ಸಾಧಿಸಿರುವುದನ್ನು ಎಲ್ಲರೂ ಮೆಚ್ಚಬೇಕಾದ್ದೇ ಆಗಿದೆ. ಆದರೆ ನಮಗೆ ಕೆಲವೊಂದು ನಡವಳಿಕೆಗಳಲ್ಲಿ ಅಡತಡೆಗಳಾಗಿ ಲೋಪದೋಷಗಳನ್ನು ನಾವು ಕಾಣುವ ಸನ್ನಿವೇಶವನ್ನು ಹೊಂದಿದ್ದೇವೆ. ಅದು ಯಾವುದು ಎಂದರೆ ಇವತ್ತಿನ ಒಂದು ಬೃಹದಾಕಾರವಾಗಿ ನಮ್ಮ ಮುಂದೆ ಇರತಕ್ಕ ಆಹಾರದ ಸಮಸ್ಯೆ. ಆಹಾರದ ಸಮಸ್ಯೆ ನಮ್ಮ ದೇಶಕ್ಕೆ ಅನುಗುಣವಾಗಿ ಪ್ರಕೃತಿಯ ಜೊತೆಗೆ ಜೂಜಾಡುತ್ತಾ ಎಷ್ಟೇ ಪ್ರಗತಿಯನ್ನು ಸಾಧಿಸಿದರೂ ಕೂಡ ಅದನ್ನು ಒಳ್ಳೆಯ ಮಟ್ಟದಲ್ಲಿ ಸಾಧಿಸಿ ನಮ್ಮ ದೇಶಕ್ಕೆ ಸ್ವಾವಲಂಬತನವನ್ನು ಸಂಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅದರಿಂದಾಗಿ ನಮ್ಮ ನಡವಳಿಕೆ ತಪ್ಪಾಗಿ ಇವತ್ತು ಈ ಕಷ್ಟಕ್ಕೆ ಗುರಿಯಾಗಿದ್ದೇವೆ ಎಂದು ನನ್ನ ಭಾವನೆ ಆಗಿದೆ. ಅದಕ್ಕೆ ನನಗೆ ತೋರುವ ಕೆಲವು ಸಲಹೆಗಳನ್ನು ಇಡಲು ಬಯಸುತ್ತೇನೆ. ಸ್ವಾಮೀ, ಇವತ್ತಿನ ಆಹಾರದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಹಾರವನ್ನು ಬೆಳೆಯತಕ್ಕ ನಮ್ಮ ದೇಶದ ಜನಸಂಖ್ಯೆ ನೂರಕ್ಕೆ ಎಂಬತ್ತು ಜನ ವ್ಯವಸಾಯಗಾರರು ಹಳ್ಳಿಗಳಲ್ಲಿ ವಾಸಮಾಡುತ್ತಾ ಇರುವಾಗ, ವ್ಯವಸಾಯವೇ ನಮ್ಮ ಮುಖ್ಯ ಕಸಬು ಎಂದು ಹೇಳಿ ನಾವು ನಂಬಿಕೊಂಡು ಇರುವಾಗ ಈ ಆಹಾರದ ಕೊರತೆ ಬರೀ ಪೇಪರಿನಲ್ಲಿ ಇದೆಯೇ ಅಥವಾ ಅಂಕಿಅಂಶಗಳನ್ನು ಸಂಗ್ರಹ ಮಾಡುವವರು ಮಾಡಿರತಕ್ಕ ತಪ್ಪಿನಲ್ಲಿದೆಯೇ ಎಂದು ಹೇಳಿ ನಾನು ಒಂದು ಸಂಶಯಕ್ಕೆ ಒಳಗಾಗಿದ್ದೇನೆ. ಏಕೆಂದರೆ ಬೆಳೆಯುವ ಯಾವ ಒಂದು ಪ್ರದೇಶವನ್ನು ತೆಗೆದುಕೊಂಡರೂ ಕೂಡ ಕೊರತೆ ಇದೆ ಎಂದು ಹೇಳುತ್ತಾರೆ. ಒಂದು ಭಾಗದಲ್ಲಿ ಬತ್ತ ಬೆಳೆಯುತ್ತಾ ಇರಬಹುದು, ಇನ್ನೊಂದು ಭಾಗದಲ್ಲಿ ಜೋಳ, ರಾಗಿ ಬೆಳೆಯುತ್ತಾ ಇರಬಹುದು, ಆಯಾಯಾ ಭಾಗದಲ್ಲಿ ಬೆಳೆಯುತ್ತಾ ಇರತಕ್ಕ ವ್ಯವಸಾಯದ ಕಸಬನ್ನು ಇಟ್ಟುಕೊಂಡಿರತಕ್ಕ ಗ್ರಾಮಾಂತರಗಳಲ್ಲಿ ಆಹಾರದ ಕೊರತೆ ಬರುವುದಕ್ಕೆ ನಾನಾ ಕಾರಣಗಳು ಇವೆ. ಬೆಳೆದಿರತಕ್ಕ ಆಹಾರ ಪದಾರ್ಥಗಳಿಗೆ ಸರಿಯಾದ ಧಾರಣೆ ಬರುವವರೆಗೂ ಇಟ್ಟು ಮಾರಾಟ ಮಾಡುವ ಚೈತನ್ಯ ಅವರಿಗೆ ಇಲ್ಲದೇ ಇರುವುದು ಮಾರುವುದಕ್ಕೆ ಸೌಲಭ್ಯ ಹಾಗೂ ಪ್ರಯಾಣ ಸೌಕರ್ಯ, ಇಲ್ಲದೇ ಮಧ್ಯಸ್ತಗಾರರ ಕೈಗೆ ಸಿಕ್ಕಿ ಅವರು ಲುಕ್ಸಾನು ಹೊಂದಿ ವ್ಯವಸಾಯ ಲಾಭದಾಯಕವಲ್ಲ ಎಂಬ ಒಂದು ಸನ್ನಿವೇಶದಲ್ಲಿ ಕಡಿಮೆ ದರದಲ್ಲಿ ಕೊಟ್ಟು ಆಹಾರದ ಕೊರತೆಯನ್ನು ಅನುಭವಿಸಿ ಬೆಳೆದವನೇ ಕೊಂಡು ಕೊಳ್ಳಬೇಕಾದ ಸನ್ನಿವೇಶವನ್ನು ನೋಡುತ್ತಾ ಇದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಆಹಾರ ಇಲ್ಲ ಎಂದು ಹೇಳುತ್ತಾ ಇದ್ದಾಗಲೂ ಕೂಡ ಆಹಾರ ಇಲ್ಲದೇ ಸತ್ತವರ ಸಂಖ್ಯೆ ನಮ್ಮ ಮುಂದೆ ಕಾಣುವುದಿಲ್ಲ. ದುಡ್ಡು ಹೆಚ್ಚು ಕೊಟ್ಟು ಆಹಾರವನ್ನು ಕೊಂಡುಕೊಳ್ಳಲು ಪ್ರಯತ್ನ ಮಾಡಬೇಕಾಗಿದೆ. ವಿತರಣೆ ಸರಿಯಾಗಿ ಆಗುತ್ತಾ ಇಲ್ಲ. ಅದಕ್ಕೆ ನಿಮ್ಮ ಯೋಜನೆ ಏನು ಎಂಬುದನ್ನು ಗಹನವಾಗಿ ಯೋಚನೆ ಮಾಡಬೇಕೆಂದು ಈ ಸನ್ನಿವೇಶದಲ್ಲಿ ಹೇಳಬಯಸುತ್ತೇನೆ. ಇವತ್ತು ನಾವು ನೂರಕ್ಕೆ ಎಂಬತ್ತು ಭಾಗ ವ್ಯವಸಾಯಗಾರರಾಗಿದ್ದೇವೆ. ಇನ್ನು ಇಪ್ಪತ್ತು ಭಾಗ ಮಾತ್ರ ಪಟ್ಟಣಗಳಲ್ಲಿರತಕ್ಕ ಜನರಿಗೆ ಆಹಾರವನ್ನು ಕೊಡುವ ಜವಾಬ್ದಾರಿಯನ್ನು ಸರ್ಕಾರ ಹೊರಬೇಕಾಗಿದೆ. ಎಂಬತ್ತು ಭಾಗ ವ್ಯವಸಾಯ ಮಾಡತಕ್ಕವನಿಂದ ಆಹಾರವನ್ನು ತೆಗೆದುಕೊಂಡು ಬಂದು ಮತ್ತೆ ಪುನಃ ಅವನಿಗೇ ಖರೀದಿಗೆ ವಾಪಸು ಕೊಡುವ ಪರಿಸ್ಥಿತಿ ಹೋದಲು ಹೋಗಬೇಕು. ಶೇಕಡ ಎಂಭತ್ತು ಭಾಗ ವ್ಯವಸಾಯಗಾರರಿಗೆ ಅವರವರ ಬೆಳೆಯನ್ನು ಅವರವರೇ ಬೆಳೆದುಕೊಳ್ಳತಕ್ಕ ಅವಕಾಶ ಇರುವಾಗ ಅವನಿಗೆ ಬೇಕಾಗತಕ್ಕ ಆಹಾರ ಪದಾರ್ಥಗಳನ್ನು ಅವನಿಗೆ ಬೇಕಾದಾಗ ವಿತರಣೆ ಮಾಡತಕ್ಕ ಹೊಣೆಯನ್ನು ಸೇವಾ ಸಹಕಾರ ಸಂಘಗಳ ಮೂಲಕ ಸಾಲದ ವ್ಯವಸ್ಥೆಯನ್ನು ಯಾವ ರೀತಿ ಮಾಡುತ್ತಾ ಇದ್ದೀರೋ ಅದೇ ಮಾಡಬೇಕು. ಅವನು ಬೆಳೆದಿರತಕ್ಕ ಪದಾರ್ಥವನ್ನು

ಮಳೆಗಾಲದಲ್ಲಿ ಅಥವಾ ಸುಗ್ಗಿ ಮುಗಿದು ಹೋದ ಕಾಲದಲ್ಲಿ ಅವನಿಗೆ ಎಷ್ಟು ಬೇಕೋ ಅಷ್ಟು ಪ್ರಮಾಣವನ್ನು ಆಯಾಯಾ ಸೇವಾ ಸಹಕಾರ ಸಂಘಗಳಿಂದ ತೆಗೆದುಕೊಳ್ಳುವುದಕ್ಕೆ ಮತ್ತು ಅವರು ಅವನು ಕೊಟ್ಟಂತಹ ಆಹಾರಧಾನ್ಯಗಳನ್ನು ಇಟ್ಟುಕೊಳ್ಳುವುದಕ್ಕೆ ನಿಗದಿಯಾದ ಒಂದು ಕಾನೂನನ್ನು ಮಾಡಬೇಕು. ಅವರಲ್ಲಿ ಅವನಿಗೆ ಎಷ್ಟು ಬೇಕೋ ಅಷ್ಟನ್ನು ಇಟ್ಟು ಮಿಕ್ಕದ್ದನ್ನು ತೆಗೆದುಕೊಂಡು ಬಂದು ಪಟ್ಟಣಗಳಲ್ಲಿ ವಾಸಮಾಡತಕ್ಕ ಶೇಕಡ 20 ಭಾಗದ ಜನ ಕೂಲಿಗಾರರು ಮತ್ತು ಇತರ ಜನರಿಗೆ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಹಾಗೆ ಮಾಡದೇ ಈ ಆಹಾರದ ನಿಯಂತ್ರಣವನ್ನು ಹಾಕಿ ಇಲ್ಲದ ಸಲ್ಲದ ಅನೀತಿಗೆ ಅವಕಾಶವನ್ನು ಕಲ್ಪಿಸಿ ಈ ರೀತಿಯ ಒಂದು ಆಹಾರದ ಕೊರತೆಯನ್ನು ಉಂಟುಮಾಡಿದ್ದೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಇದನ್ನು ಬಿಚ್ಚು ಮನಸ್ಸಿನಿಂದ ಹೇಳುತ್ತಾ ಇದ್ದೇನೆ. ಹಳ್ಳಿಗನಾಗಿ, ವ್ಯವಸಾಯಗಾರನಾಗಿ ಹೇಳಬೇಕೆಂದರೆ ಇವತ್ತು ವ್ಯವಸಾಯ ಮಾಡತಕ್ಕವನು ಖಂಡಿತವಾಗಿಯೂ ಅವನು ಕೊರತೆಯನ್ನು ಅನುಭವಿಸುವುದಕ್ಕೆ ತಯಾರಾಗಿಲ್ಲ. ತನಗೆ ಬೇಕಾದಷ್ಟು ಭಾಗವನ್ನು ಇಟ್ಟುಕೊಳ್ಳುವುದಕ್ಕೆ ತಯಾರಾಗಿದ್ದಾರೆ. ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕ ಸನ್ನಿವೇಶ ಯಾವಾಗ ಬರುತ್ತದೆ ಎಂದರೆ ಹಣದ ಕೊರತೆ ಇದ್ದಾಗ. ಅಂತಹ ಸಂದರ್ಭದಲ್ಲಿ ಸಾಲಗಾರನಾದಾಗ, ಇಲ್ಲದ ಸಲ್ಲದ ಖರ್ಚು ಬಿದ್ದಾಗ ಮಾರಾಟ ಮಾಡಬೇಕಾದ ಸನ್ನಿವೇಶ ಬರುತ್ತದೆ. ಅಂತಹ ಸನ್ನಿವೇಶದಲ್ಲಿ ಅವನಿಗೆ ಅನುಕೂಲತೆಯನ್ನು ಕಲ್ಪಿಸಿಕೊಡುವುದಕ್ಕೆ ಸೇವಾ ಸಹಕಾರ ಸಂಘಗಳ ಮೂಲಕ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲವನ್ನು ಯಾವ ರೀತಿ ಕೊಡುತ್ತೀರೋ ಅದೇ ರೀತಿ ಆಹಾರ ಧಾನ್ಯಗಳನ್ನು ಇಟ್ಟುಕೊಳ್ಳುವುದಕ್ಕೂ ಕೂಡ ಪ್ರಯತ್ನ ಮಾಡಬೇಕು. ಆ ಮೂಲಕ ಅವಶ್ಯಕತೆ ಬಿದ್ದಾಗ ಅದನ್ನು ಅವನಿಗೆ ಕೊಡಬೇಕು. ಸ್ವತಃ ಅನೇಕ ಗ್ರಾಮಗಳಲ್ಲಿ ನಾವು ಈ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ಕೋ ಆಪರೇಟೀವ್ಸ್ ಗ್ರೇನ್ಸ್ ಬ್ಯಾಂಕ್ ಅಂತ ಹೇಳಿ ಮಾಡಿ ಕೊಂಡು ನಮಗೆ ಬೇಕಾದಾಗ ಉಪಯೋಗಿಸುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಸರ್ಕಾರದ ಒಂದು ನಿಯಮದ ಪ್ರಕಾರ ಸೇವಾ ಸಹಕಾರ ಸಂಘಗಳಿಗೆ ಗೋಡೌನ್‌ಗಳನ್ನು ಕಟ್ಟಿಸಿಕೊಟ್ಟು ಅವರಿಗೆ ಬೇಕಾಗುವಷ್ಟು ಮಾಲನ್ನು ಆಯಾಯಾ ಗ್ರಾಮಗಳಲ್ಲಿ ತೆಗೆದುಕೊಳ್ಳುವ ಒಂದು ವ್ಯವಸ್ಥೆಯನ್ನು ಮಾಡಬೇಕು. ಶೇಕಡ ಇಪ್ಪತ್ತರಷ್ಟು ಜನ ಇರತಕ್ಕ ಪಟ್ಟಣಿಗರ ಒಂದು ಆಹಾರದ ಕೊರತೆಯನ್ನು ಹೋಗಲಾಡಿಸುವುದಕ್ಕೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಿದ್ದೇ ಆದರೆ ಆಹಾರವನ್ನು ಹೊರದೇಶಗಳಿಂದ ತರಿಸಿಕೊಳ್ಳುತ್ತೀರ ಹಳ್ಳಿಗಳಲ್ಲಿ ಹೆಚ್ಚಾಗಿರುವುದನ್ನು ಸಂಗ್ರಹ ಮಾಡಿ ಶೇಕಡ 20 ಭಾಗದ ಪಟ್ಟಣದ ವಾಸದವರಿಗೆ ಸಂಗ್ರಹಿಸಿ ಹಂಚುವುದು ಕಷ್ಟಕರವಾದ ಕೆಲಸವಾಗಲಾರದು. ನೀವು ಹಳ್ಳಿಗಳಿಂದ ತಂದು ಮತ್ತೆ ಪುನಃ ಹಳ್ಳಿಗಳಿಗೆ ವಾಪಸು ಕಳುಹಿಸುವ ಪದ್ಧತಿ ಇದು ಒಂದು ತಪ್ಪಿನ ಕೆಲಸ ಎಂದು ನಾನು ಹೇಳುತ್ತೇನೆ. ಇದನ್ನು ಸರ್ಕಾರದವರು ಗಹನವಾಗಿ ಯೋಚನೆ ಮಾಡಿ ತಮ್ಮ ನಿಯಂತ್ರಣದ ಒಂದು ಪದ್ಧತಿಯನ್ನು ಬದಲಾಯಿಸಬೇಕು. ಅದರ ಜೊತೆಯಲ್ಲಿ ಈಗ ನೀವು ಔದ್ಯೋಗೀಕರಣ ಮಾಡಬೇಕೆಂದು ಹೇಳಿ ಯಂತ್ರಗಳ ಒಂದು ಯುಗವನ್ನು ಒಂದು ಕಡೆ ಮುಟ್ಟುತ್ತಾ ಇದ್ದೇವೆ ಎಂದು ಹೇಳುತ್ತಾ ಇದ್ದೀರಿ. ಮತ್ತೊಂದು ಕಡೆ ಗ್ರಾಮೋದ್ಯೋಗಗಳನ್ನು ಮಾಡುತ್ತಾ ಇದ್ದೀರಿ ಹಾಗಿರುವಾಗ ತಮ್ಮ ಆಹಾರದ ನೀತಿ ಯಾವ ಪ್ರಕಾರವಾಗಿ ಇದೆ ಎಂಬುದನ್ನು ಯೋಚನೆ ಮಾಡಿದ್ದೇ ಆದರೆ ಈಚೆಗೆ ಕೇಳುತ್ತಾ ಇದ್ದಹಾಗೆ ಹೊಸದಾಗಿ ಹೊಸ ರೈಸ್ ಮಿಲ್ ಒಂದನ್ನು ಪ್ರಾರಂಭ ಮಾಡಲು ಮಂಡ್ಯದಲ್ಲಿ ಸುಮಾರು 15 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ಎಂದು ಕೇಳುತ್ತೇವೆ. ಈಗಾಗಲೇ ಅನೇಕ ಮಿಲ್ಲುಗಳು ಇವೆ. ಇವತ್ತು ನಮ್ಮ ರಾಜ್ಯದ ಪರಿಸ್ಥಿತಿಯನ್ನು ತೆಗೆದುಕೊಂಡರೆ ನಮ್ಮ ಉದ್ಯೋಗ ವಿನಿಮಯದ ಕಛೇರಿಗಳ ಅಂಕಿಅಂಶಗಳನ್ನು ತೆಗೆದುಕೊಂಡರೆ ಸಾಕಾದಷ್ಟು ಕೆಲಸವನ್ನು ಕೊಡುವುದಕ್ಕೆ ಕೆಲವಿಸಲ್ಲಿ. ಅವರಿಗೆ ಕೆಲಸ ಕೊಡಬೇಕಾದರೆ ಎಂಪ್ಲಾಯ್‌ಮೆಂಟ್ ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಬೇಕು. ಅದನ್ನು ಕ್ರಿಯೇಟ್ ಮಾಡುವುದಕ್ಕೆ ಬದಲಾಗಿ ಇಂತಹ ಅಕ್ಕಿ ಗಿರಣಿಗಳನ್ನು ಹೆಚ್ಚು ಮಾಡಿಕೊಳ್ಳುತ್ತಾ ಹೋದರೆ ನಾವು ಬತ್ತವನ್ನು ಒಡೆದು ಅಕ್ಕಿ ಮಾಡುವುದಕ್ಕೆ ಹೊರಟರೆ ಇಂತಹ ಮಿಲ್‌ಗಳಿಂದ ದೊರೆಯುತಕ್ಕ ಅಕ್ಕಿ ಎಷ್ಟು ದಿವಸಕ್ಕೆ ಬರುತ್ತದೆ? ಅದರಿಂದ ಎಷ್ಟು ಜನರನ್ನು ನಾವು ದುಡಿಸಿಕೊಳ್ಳಬಹುದು? ಅದಕ್ಕೆ ಎಷ್ಟು ಹಣವನ್ನು ಹಾಕಬಹುದು? ಇವತ್ತು ಅಂತಹ ಮಿಲ್ಲುಗಳನ್ನು ಹಾಕದೇ ಹೋದರೆ ಇವತ್ತಿನ ನಮ್ಮ ಆಹಾರದ ನೀತಿಯಿಂದ ಅಕ್ಕಿಯನ್ನು ಸರಬರಾಜು ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೇ ಎಂಬುದನ್ನು ಯೋಚನೆ ಮಾಡಿದ್ದೇ ಆದರೆ ಅಂತಹ ಮಿಲ್ಲುಗಳ ಅವಶ್ಯಕತೆ ಕಂಡುಬರುವುದಿಲ್ಲ. ಎಲ್ಲಾ ರಂಗದಲ್ಲೂ ಕೊರತೆಯನ್ನು ನೋಡುತ್ತಾ ಇದ್ದೇವೆ. ಈಗ ತಾನೆ ಯೋಜನೆಗೆ ದುಡ್ಡಿಲ್ಲ ಎಂದು ಹೇಳುತ್ತಾ ಇದ್ದಾರೆ. ವಿದ್ಯಾಭ್ಯಾಸ ಇಲಾಖೆಗೆ ದುಡ್ಡು ಬೇಕಾಗಿದೆ. ವೈದ್ಯಕೀಯಕ್ಕೆ ದುಡ್ಡು ಬೇಕಾಗಿದೆ, ಇನ್ನೂ ಅನೇಕ ರಂಗಗಳಲ್ಲಿ ದುಡ್ಡಿನ ಅವಶ್ಯಕತೆ ಇರುವಾಗ ಈಗಾಗಲೇ ಬೇಕಾದಷ್ಟು ಮಿಲ್ಲುಗಳು ಇರುವುದರಿಂದ ಹೊಸ ಮಿಲ್ಲುಗಳ ಹೆಚ್ಚಿನ ಒಂದು ಉಪಯೋಗ ಕಾಣುತ್ತಾ ಇಲ್ಲ. ಇವತ್ತು ನಾವು ಉದ್ಯೋಗವನ್ನು

(ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ)

ಕಲ್ಪಿಸುವುದಕ್ಕೆ ಏನಾದರೂ ಒಂದು ಗ್ರಾಮೋದ್ಯೋಗವನ್ನು ಮಾಡಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಹಳ್ಳಿಗಳಲ್ಲಿ ದೊರೆಯತಕ್ಕ ಸಾಮಾನಿನಿಂದ ಹಳ್ಳಿಗಳಲ್ಲಿಯೂ ತಕ್ಕ ಪದಾರ್ಥ ಗಳನ್ನು ತಯಾರುಮಾಡಿ ಅಲ್ಲಿಂದ ಪಟ್ಟಣಗಳಿಗೆ ತರುವ ವ್ಯವಸ್ಥೆ ಮಾಡಿದರೆ ಹಳ್ಳಿಗಳಲ್ಲಿ ಒಂದು ಕೆಲಸದ ವ್ಯವಸ್ಥೆ ಮಾಡಿದಂತೆ ಆಗುತ್ತದೆ, ಮತ್ತು ಅದರಿಂದ ಹಳ್ಳಿಗಳ ಜನರು ಪಟ್ಟಣಕ್ಕೆ ಬರುವುದನ್ನೂ ಕೂಡ ತಡೆಗಟ್ಟಿದಂತಾಗುತ್ತದೆ. ಇನ್ನೊಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಇವತ್ತು ಕೆಲವು ಸ್ನೇಹಿತರು ಮಾತನಾಡುತ್ತಾ ವ್ಯವಸಾಯದ ಇಲಾಖೆ ಉಪಯೋಗ ಇಲ್ಲ ಅದನ್ನು ತೆಗೆದುಹಾಕಬೇಕು ಎಂದು ಹೇಳಿದರು. ವ್ಯವಸಾಯದ ಇಲಾಖೆಯಲ್ಲಿ ತಪ್ಪು ಇದೆ; ಅಥವಾ ಅದರಲ್ಲಿ ದೋಷ ಇದೆ ಎಂದು ಹೇಳಿದರೂ ಕೂಡ ಇವತ್ತು ವ್ಯವಸಾಯದ ಇಲಾಖೆಯಲ್ಲಿ ಯಾವ ರೀತಿ ಕಾರ್ಯಕ್ರಮ ನಡೆಯುತ್ತಾ ಇದೆ ಎಂಬುದನ್ನು ನೋಡಬೇಕು. ವ್ಯವಸಾಯದ ಇಲಾಖೆಗೆ ಆಹಾರದ ವಿತರಣೆ ಮಾಡತಕ್ಕ ಅಧಿಕಾರವನ್ನೂ ಕೊಡಬೇಕು. ಬರೀ ಮಳೆ ಬಂದಾಗ ಬೆಳೆಯಬೇಕೆಂದು ಹೇಳಿದ ಮಾತ್ರಕ್ಕೆ ಬೆಳೆ ಬೆಳೆಯುವುದಿಲ್ಲ. ಬೆಳೆದದ್ದನ್ನು ತೆಗೆದುಕೊಂಡು ಹೋಗುವ ಜವಾಬ್ದಾರಿ ಸಹ ವ್ಯವಸಾಯದ ಇಲಾಖೆಯಲ್ಲಿ ಇದ್ದರೆ ರೈತರಿಗೆ ಅವರಲ್ಲಿ ನಂಬಿಕೆ ಇರುತ್ತದೆ. ಹೆಚ್ಚಾಗಿ ಬೆಳೆಯನ್ನು ಬೆಳೆಯುತ್ತಾರೆ. ಇಲ್ಲದೇ ಇದ್ದರೆ ಅವರು ಬರೀ ಹೇಳುವ ವರಾಗುತ್ತಾರೆಯೇ ವಿನಾ ಬೇರೆ ಯಾವ ಕೆಲಸವೂ ಆಗುವುದಿಲ್ಲ. ಒಂದು ಉದಾಹರಣೆಯನ್ನು ಕೊಡಬೇಕಾದರೆ: ವ್ಯವಸಾಯದ ಇಲಾಖೆಯವರು ಸೀ ಐಲೆಂಡ್ ಕಾಟನ್‌ಗೆ ಪ್ರೋತ್ಸಾಹ ನೀಡಿ ಅದನ್ನು ಬೆಳೆಯಲು ಅವಕಾಶ ಮಾಡಿದ್ದಾರೆ. ಮಲೆನಾಡಿನಲ್ಲಿ ಅದನ್ನು ಬೆಳೆಯಲು ಅನುಕೂಲ ವಾಗಿದೆ ಎಂದು ಹೇಳಿ ಅದರ ಮಾರಾಟಕ್ಕೆ ತಕ್ಕ ವ್ಯವಸ್ಥೆ ಮಾಡಿದರೆ ಸರಿಹೋಗುತ್ತದೆಂದು ಭಾವಿಸಿ ತಕ್ಕ ವ್ಯವಸ್ಥೆ ಮಾಡಿದ್ದಾರೆ. ಈ ರೀತಿಯ ಪೂರ್ಣ ಅಧಿಕಾರ ವ್ಯವಸಾಯ ಇಲಾಖೆಗೆ ಇರಬೇಕು. ಎಲ್ಲೆಲ್ಲಿ ಬತ್ತ, ಆಹಾರ ಪದಾರ್ಥ, ಕಬ್ಬು ಮುಂತಾದುವನ್ನು ಬೆಳೆ ಮಾಡಲು ಅವಕಾಶವಿದೆಯೋ ಅಲ್ಲೆಲ್ಲಾ ಅದನ್ನು ಸಾಕಷ್ಟು ಬೆಳೆಯಲು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಹಣಕಾಸಿನ ಮಂತ್ರಿಗಳು ಭಾಷಣ ಮಾಡುವಾಗ ಮಾರಾಟ ತೆರಿಗೆ ಬಗ್ಗೆ ಅಂಕಿಅಂಶ ಕೊಟ್ಟಿದ್ದಾರೆ. 1959-60ರಿಂದ ಸೇಕಡ 88ರಿಂದ 90ರ ವರೆಗೆ ಈ ತೆರಿಗೆ ಚೆನ್ನಾಗಿ ವಸೂಲಾಗಿದೆ. ಇದು ನಿಜ ವಾಗಿಯೂ ಪ್ರಶಂಸೆ ಮಾಡತಕ್ಕ ವಿಚಾರ. ಈ ತೆರಿಗೆ ಹೆಚ್ಚಾಗುವ ಬಗ್ಗೆ ಒಂದು ಸಲಹೆ ಹಿಂದೆಯೇ ಕೊಟ್ಟಿದ್ದೆ. ಈಗ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಸ್ಥಳೀಯ ಸಂಸ್ಥೆಗಳಿಗೆ ದೊರಯುವ ಅವಕಾಶ ಮಾಡಿದ್ದಾರೆ. ಸೇಕಡ 90 ಭಾಗ ಆ ಸಂಸ್ಥೆಗಳಿಗೆ ಹೋಗಿ 10 ಭಾಗ ಸರಕಾರಕ್ಕೆ ಬರುತ್ತದೆ. ಹೆಚ್ಚು ಭಾಗ ಸ್ಥಳೀಯ ಸಂಸ್ಥೆಗಳಿಗೆ ಹೋದರೂ ಸ್ಥಳದಲ್ಲಿ ತೆರಿಗೆ ವಸೂಲಿ ಮಾಡುವ ಮಾಲೀಕರು ಸ್ಟ್ಯಾಂಪ್ ಹಚ್ಚದೇ ತಪ್ಪಿಸಿಕೊಳ್ಳುವುದನ್ನು ಪರೀಕ್ಷೆ ಮಾಡಲು ಸ್ಥಳೀಯ ಸಂಸ್ಥೆ ಅಧಿಕಾರಿಗಳಿಗೆ ಅಧಿಕಾರವಿಲ್ಲದಿರುವುದರಿಂದ ಮನಸ್ಸಿಗೆ ಬಂದಹಾಗೆ ಮಾಡಬಹುದು, ಹಚ್ಚಬಹುದು ಅಥವಾ ಬಿಡಬಹುದು. ಹೀಗಾಗಿ ವಸೂಲಿ ಕಡಮೆಯಾಗಿದೆ. ಇಂಥ ಪಿಲ್‌ಫ್ರೇಜ್ ನಡೆಯು ವುದನ್ನು ತಪ್ಪಿಸಿ ಹಾಗಾಗಲು ಅವಕಾಶವಿಲ್ಲದಂತೆ ಮುಂದೆ ಪಂಚಾಯ್ತಿ ಬಿಲ್ಲು ಬರುವಾಗ ಅವಕಾಶ ಅದರಲ್ಲಿ ಮಾಡಬೇಕು.

ಈಗ ಮಾರಾಟ ತೆರಿಗೆಯಿಂದ ಮೆಡಿಕಲ್ ಪ್ರಾಕ್ಟೀಷನರುಗಳಿಗೆ ವಿನಾಯ್ತಿ ಇದೆ. ಪ್ರೈವೇಟ್ ಪ್ರಾಕ್ಟೀಷನರುಗಳು ಅವರು ಉಪಯೋಗಿಸುವ ಔಷಧಿಗಳಿಗೆ ಮಾರಾಟ ತೆರಿಗೆ ಕೊಡುವುದಿಲ್ಲ ಅದೇ ಅವುಗಳ ವ್ಯಾಪಾರಸ್ಥರು ತೆರಿಗೆ ಕೊಡಬೇಕು. ಎಷ್ಟೋ ಪ್ರೈವೇಟ್ ಪ್ರಾಕ್ಟೀಸ್ ಮಾಡಲು ಅವಕಾಶವಿಲ್ಲದಿರುವವರೂ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಸರಕಾರಕ್ಕೆ ಬರುವುದನ್ನು ತಪ್ಪಿಸುತ್ತಿದ್ದಾರೆ. ಇದನ್ನು ಗಮನಿಸಿ ಸೂಕ್ತ ಕ್ರಮ ಕೈಕೊಂಡರೆ ನ್ಯಾಯವಾಗಿ ಬರಬೇಕಾದ ತೆರಿಗೆ ವಸೂಲಾಗಲು ಅವಕಾಶವಾಗುತ್ತದೆ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟಿದ್ದ ಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಜೆ. ದೇವಯ್ಯ.—ಸ್ವಾಮೀ, ಈಗ ಹಣಕಾಸಿನ ಸಚಿವರು 65-66ನೆಯ ಸಾಲಿನ ಬಜೆ ಟ್ಟನ್ನು ಸಭೆಯ ಮುಂದಿಟ್ಟಿದ್ದಾರೆ. ನಾನು ಎರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇ ಕೆಂದಿದ್ದೇನೆ. ವರ್ಷೇವರ್ಷೆ ನೀರಾವರಿಗಾಗಿ ಕೋಟಿಗಟ್ಟಲೆ ಹಣ ಖರ್ಚುಮಾಡುತ್ತಿದ್ದಾರೆ. ಅದ ರಲ್ಲಿ ಸಣ್ಣಸಣ್ಣ ನೀರಾವರಿ ಕೆಲಸಗಳಿಗೆ ಮಾಡಿರುವ ಖರ್ಚಿನಿಂದ ಎಷ್ಟು ಎಕರೆಗಳಲ್ಲಿ ಫಸಲು ಬಂದಿದೆ, ವರ್ಷಕ್ಕೆ ಎಷ್ಟು ಖರ್ಚಾಗಿದೆ, ಎಷ್ಟು ಬೆಳೆಯಾಗಿದೆ, ಉತ್ಪತ್ತಿ ಎಷ್ಟು ಎಂದು ಒಂದು ಸಮಿತಿಮಾಡಿ ವಿಚಾರಿಸಿ ಸಭೆಗೆ ತಿಳಿಸಬೇಕೆಂದು 2—3 ಸಲ ಸಭೆಯಲ್ಲಿ ಪ್ರಾರ್ಥನೆ ಮಾಡಿದೆ, ಖರ್ಚುಮಾಡುವು

ದರಲ್ಲಿ ಸಂದೇಹವಿಲ್ಲ. ಎಲ್ಲರಿಗೂ ಕಾಣುವಹಾಗೆ 2 ಕೋಟಿ ರೂಪಾಯಿಗಳ ಬಡ್ಜೆಟ್ಟಿದ್ದುದು ಇವತ್ತು 125 ಕೋಟಿ ಆಗಿದೆ. ಅದನ್ನು ನಾನಾ ಕಾಂಗಾರಿಗಳಿಗೆ ಖರ್ಚುಮಾಡುತ್ತಿದ್ದಾರೆ. ವಿಶ್ವೇಶ್ವರಯ್ಯ ನಾಲೆ ಕೆಳಗೆ ವಿಶ್ವೇಶ್ವರಯ್ಯನವರಿದ್ದಾಗ ಎಷ್ಟು ನೀರಾವರಿ ಆಯಿತು, ಈಚೆಗೆ ಎಷ್ಟಾಗಿದೆ ಎಂಬ ಲೆಕ್ಕವಿದೆ. ಈ ಸಂಬಂಧದಲ್ಲಿ ಒಂದು ಉದಾಹರಣೆ ಕೊಡುತ್ತೇನೆ. 57ನೆಯ ಇಸವಿಯಲ್ಲಿ ವೀರಣ್ಣ ಗೌಡರು ಮಂತ್ರಿಗಳಾಗಿದ್ದಾಗ ಮಂಡ್ಯ ತಾಲ್ಲೂಕು ಬಸರಾಳು ಕೆರೆಗೆ ಮತ್ತು ಇತರ ಕಡೆಗೆ ನೀರು ಬರುವಂತೆ ಮಾಡಲು ದೊಡ್ಡ ಗಂಗವಾಡಿ ಬಳಿ ಫೌಂಡೇಷನ್ ಹಾಕಿದರು. ಅದಕ್ಕೆ 6 ಲಕ್ಷ ರೂಪಾಯೋಏನೋ ಖರ್ಚಾಗಿದೆ ಎಂದು ಹೇಳಿದರು. ಸುಮಾರು 8 ವರ್ಷಗಳಿಂದ ಆ ಕೆಲಸವಾಗಿಲ್ಲ, ಆರೇಳು ಲಕ್ಷ ಖರ್ಚಾಗಿದ್ದರೂ ನೀರು ಬಂತೇ, ಕಾಲುವೆ ಕೆಲಸವಾಗಿದೆಯೇ ಎಂದು ನೋಡುವವರೇ ಗತಿಯಿಲ್ಲ. ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗಲೂ ಇದನ್ನು ಹೇಳಿದೆ, ಈಗ ಅವರು ಆರ್ಥಿಕ ಮಂತ್ರಿಗಳಾಗಿದ್ದಾರೆ, ಕೇಳಿದರೂ ಸುಮ್ಮನಿರುತ್ತಾರೆ. ಅವರ ಕೈಲಿ ಆ ಇಲಾಖೆ ಇಲ್ಲದಿರುವುದರಿಂದ ಕೇಳಿದರೆ ಹಣ ಕೊಡುತ್ತೇವೆಂದು ಹೇಳುತ್ತಾರೆ. ಹೀಗಾಗಿ ಹೊಸ ನೀರು ಬಂದು ಹಳೇ ನೀರು ತಳ್ಳಿದ ಹಾಗಿದೆ. ಹಳೆಯ ಮೈಸೂರಿಗೆ ಹೆಚ್ಚು ಖರ್ಚುಮಾಡುತ್ತಿಲ್ಲ. ಇದಕ್ಕೆ ಬೇಕಾದರೆ ಅನೇಕ ಉದಾಹರಣೆ ಕೊಡುತ್ತೇನೆ. ವಿಶ್ವೇಶ್ವರಯ್ಯನವರ ಕೃಪಾಕಟಾಕ್ಷದಿಂದ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆಯಾಗಿ ಎಷ್ಟೋ ಸಂಪಾದನೆ ಆಗಿದೆ. ಸಕ್ಕರೆ ತಯಾರಿಕೆಯಿಂದ ಇಂಡಿಯಾ ಸರಕಾರಕ್ಕೆ ಮತ್ತು ಮೈಸೂರು ಸರಕಾರಕ್ಕೆ ಎಕ್ಸೈಜು ಸುಂಕ ಮುಂತಾದುವುಗಳಿಂದ ಎಷ್ಟೋ ಉತ್ಪತ್ತಿ ಬರುತ್ತಿದೆ. ಕಬ್ಬಿನಮೇಲೆ ಹಾಕುವ ಸೆಸ್ಸಿನಿಂದ ಲಕ್ಷಾಂತರ ರೂಪಾಯಿಗಳ ಸಂಪಾದನೆ ಇದೆ. ಇದು ಯಾವ ರೀತಿ ಖರ್ಚಾಗುತ್ತಿದೆ ? ಇದರಲ್ಲಿ ಎರಡಾಣೆ ಕೂಡ ರೈತರಿಗಾಗಿ ಖರ್ಚಾಗುತ್ತಿಲ್ಲ. ಆರ್ಥಿಕ ಮಂತ್ರಿಗಳು ಇದರ ತಪಶೀಲನ್ನು ಹೇಳಬೇಕು. ಇನ್ನೊಂದು ಇಂಡಿಯಾ ಸರಕಾರ ಸ್ಪೆಷಲ್ ಬೆಲೆಯನ್ನು ಕೊಡಬೇಕೆಂದು ಸಕ್ಕರೆ ಕಂಪೆನಿಯವರಿಗೆ ಆಜ್ಞೆ ಮಾಡಿದೆ. ಆದರೆ ಕಾರ್ಖಾನೆಯ ಡೈರೆಕ್ಟರು ನಮಗೆ ಅದರಂತೆ ಹಣ ಕೊಡುತ್ತಿಲ್ಲ. ಹಣವಿಲ್ಲ, ಕೊಡುವುದಕ್ಕೆ ಆಗುವುದಿಲ್ಲ ಎಂದು ಅವರು ಕೇಂದ್ರಕ್ಕೆ ಅಪೀಲು ಮಾಡಿದ್ದಾರೆಂಬ ವರ್ತಮಾನವಿದೆ. 58-59ರಲ್ಲಿ ಟನ್ನಿಗೆ ನಾಲ್ಕೂವರೆಯಂತೆ ಸ್ಪೆಷಲ್ ಬೆಲೆ, 59-60ಕ್ಕೆ 9 ರೂಪಾಯಿನಂತೆಯೆ ಬಿಟ್ಟು 5 ವರ್ಷಗಳಿಂದ ಸುಮಾರು 50 ಲಕ್ಷ ರೈತರಿಗೆ ಬರಬೇಕಾಗುತ್ತೆ ಎಂದು ಕೇಳುತ್ತೇನೆ. ರೈತವರ್ಗದವರಿಗೆ ಬರಬೇಕಾದ್ದನ್ನು ಕೊಡದೆ ಕಾರ್ಖಾನೆಯಲ್ಲಿ ಬೇಕಾಗುವಷ್ಟು ಜನರನ್ನು ಇಟ್ಟುಕೊಂಡು ಹೆಚ್ಚು ಖರ್ಚುಮಾಡುವುದನ್ನು ತಪ್ಪಿಸಬೇಕು.

ಇದನ್ನು ಸರಕಾರದವರು ಮನಸ್ಸಿಟ್ಟು ವಿಮರ್ಶೆ ಮಾಡಬೇಕು. ವ್ಯವಸಾಯ ಮಾಡುವವನಿಗೆ ಏನೇನು ಕಷ್ಟಗಳಿವೆ ಎನ್ನುವುದನ್ನೂ ತಿಳಿದುಕೊಳ್ಳಬೇಕು. ಕಬ್ಬಿಣದ ಸಾಮಾನು ಒಬ್ಬ ರೈತನಿಗೆ ಎಷ್ಟು ಬೇಕು ಎನ್ನುವುದನ್ನೂ ತಿಳಿದುಕೊಳ್ಳಬೇಕು. ಒಂದು ಗಾಡಿಯ ಬೆಲೆ 500—600 ರೂಪಾಯಿ ಆಗಿದೆ. 200 ರೂಪಾಯಿಗಳಿಗೆ ಬರುತ್ತಿದ್ದ ಎತ್ತುಗಳಿಗೆ ಸಾವಿರ ರೂಪಾಯಿ ಕೊಡಬೇಕು. ಮಮ್ಮಿಗೆ 12 ಆಣೆ ಇದ್ದದ್ದು ಅದೂ ಚಿಲ್ಲರೆ ರೂಪಾಯಿ ಆಗಿದೆ. ಹೀಗೆಯೇ ಹಾರೆ, ಪಿಕಾಸಿ, ಇವಕ್ಕೆಲ್ಲ ಬೆಲೆ ಜಾಸ್ತಿಯಾಗಿದೆ. ಸೊಸೈಟಿಗಳಿಗೆ ಅಲ್ಪಾವಧಿ ಸಾಲ ತೆಗೆದುಕೊಂಡಿರುವುದರ ಮೇಲೆ ಬಡ್ಡಿಯನ್ನು ಕೊಡಬೇಕು, ಅನೇಕ ಸಾಲಗಳಿಗೆ ಬಡ್ಡಿಯನ್ನು ಕೊಡಬೇಕು, ಕಂದಾಯ ಕೊಡಬೇಕು, ಕಂದಾಯದ ಮೇಲೆ ಸೆಸ್‌ಗಳನ್ನು ಕೊಡಬೇಕು. ಹೀಗೆ ಇನ್ನೂ ಅನೇಕ ತರಹ ಖರ್ಚುಗಳಿವೆ. ರೈತನಾದವನು ಇದನ್ನೆಲ್ಲ ಎಲ್ಲಿಂದ ಕೊಡುತ್ತಾನೆ ಎಂದು ಯೋಚನೆ ಮಾಡಬೇಕು. ನಮ್ಮ ಆರ್ಥಿಕ ಸಚಿವರು ಎಲ್ಲಿಯ ವರೆಗೆ ಕಂದಾಯವನ್ನು ಹಾಕಬಹುದು ಎನ್ನುವುದನ್ನೂ, ಯಾವ ರೀತಿ ಹಾಕಬಹುದು ಎನ್ನುವುದನ್ನೂ ನೋಡಬೇಕು. ಬಂದು ಎಕರೆ ಭೂಮಿಯಲ್ಲಿ ಬತ್ತದ ಬೆಳೆ ತೆಗೆಯಬೇಕಾದರೆ ಏನು ಖರ್ಚಾಗುತ್ತದೆ, ಕಬ್ಬು ಬೆಳೆಯಬೇಕಾದರೆ ಏನು ಖರ್ಚಾಗುತ್ತದೆ, ಅವನಿಗೆ ಎಷ್ಟು ಉಳಿಯುತ್ತದೆ ಎನ್ನುವುದನ್ನು ಸರ್ಕಾರದವರು ನೋಡಬೇಕು. ಹಿಂದೆ ಒಳ್ಳೆಯ ಬಿತ್ತನೆಯನ್ನು ಕೊಡುತ್ತಿದ್ದರು. ಈಗ ಆ ಬಿತ್ತನೆ ಸಿಕ್ಕುತ್ತ ಇಲ್ಲ. ವ್ಯವಸಾಯ ಇಲಾಖೆಯವರು ಒಳ್ಳೆಯ ಬಿತ್ತನೆಯನ್ನು ಎಲ್ಲ ತಾಲ್ಲೂಕುಗಳಿಗೂ ಹಂಚಬೇಕು. ಒಳ್ಳೆಯ ಬಿತ್ತನೆ ಇಲ್ಲದೆ ಇರುವುದರಿಂದ ಅನ್ಯಾಯವಾಗುತ್ತಿದೆ. ಬತ್ತ, ರಾಗಿ, ಜೋಳ ಇವುಗಳ ಒಳ್ಳೆಯ ಬಿತ್ತನೆಯನ್ನು ಒದಗಿಸಿ ಸಹಾಯ ಮಾಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

5.30 P.M.

ನಮ್ಮ ಆಯವ್ಯಯದಲ್ಲಿ ನಾಲ್ಕು ಕೋಟಿ ರೂಪಾಯಿ ಖೋತಾ ಇದೆ ಎಂದು ನಮ್ಮ ಆರ್ಥಿಕ ಸಚಿವರು ಹೇಳಿದ್ದಾರೆ. ಇದಕ್ಕೆ ನಾವು ಸಾಲ ಮಾಡಬೇಕಾಗಿಲ್ಲ, ಹೆಚ್ಚು ತೆರಿಗೆಗಳನ್ನೂ ಹಾಕಬೇಕಾಗಿಲ್ಲ. ಈಗ ಖರ್ಚು ಮಾಡುತ್ತಿರುವುದರಲ್ಲೇ ಸ್ವಲ್ಪ ಕಡಮೆ ಮಾಡಿದರೆ ದುಡ್ಡು ಉಳಿಯುತ್ತದೆ. ಜೀಪ್

(ಶ್ರೀ ಜೆ. ದೇವಯ್ಯ)

ಈಗ ಎಂಥೆಂಥವರಿಗೋ ಸಿಕ್ಕುತ್ತದೆ, ಪೆಟ್ರೋಲ್ ಸಿಕ್ಕುತ್ತದೆ. ಅದು ಯಾರಿಗೂ ಗೊತ್ತಾಗುತ್ತಿಲ್ಲ. ಅದನ್ನು ನೋಡಿದರೆ ಹೊಟ್ಟೆ ಉರಿಯಾಗುತ್ತದೆ. ಮದುವೆ ಮನೆಗೆ, ಶೋಭನದ ಮನೆಗೆ, ಎಲ್ಲದಕ್ಕೂ ಜೀಪನ್ನು ಉಪಯೋಗಿಸುತ್ತಾರೆ. ತರಕಾರಿ ತರಲು ಮತ್ತು ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗಲು ಜೀಪನ್ನು ಉಪಯೋಗಿಸುತ್ತಾರೆ. ಇದಕ್ಕೆಲ್ಲ ಖರ್ಚಾಗುವ ದುಡ್ಡನ್ನು ನಮ್ಮ ಹಣಕಾಸಿನ ಮಂತ್ರಿಗಳು ಉಳಿಸಿದರೆ ನಾಲ್ಕು ಕೋಟಿ ರೂಪಾಯಿ ಉಳಿಯುತ್ತದೆ. ನಾವು ಇದನ್ನೆಲ್ಲ ಹೇಳಿದರೆ ಪಕ್ಷದ್ವೇಷದಿಂದ ಹೇಳುತ್ತಾರೆನ್ನಬಹುದು. ಮನುಷ್ಯ ಜನ್ಮ ಬಹಳ ಪವಿತ್ರವಾದುದು ಎಂದು ಪೂರ್ವಿಕರು ಹೇಳುತ್ತಾರೆ. ಹಾಗಿರುವುದರಿಂದ ಇಲ್ಲದ್ದನ್ನು ನಾವು ಹೇಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ.

ವರ್ತಕರು ಮಾತ್ರ ಸಾಹುಕಾರರಾಗುತ್ತಿದ್ದಾರೆಂದು ಕಾಂಗ್ರೆಸ್ ಸರ್ಕಾರದವರು ಹೇಳುತ್ತಾರೆ. ವರ್ತಕರು ವ್ಯಾಪಾರ ಮಾಡುತ್ತಾರೆ, ಅದರಿಂದ ಸಂಪಾದನೆ ಮಾಡುತ್ತಾರೆ. ಈಗ ಸೊಸೈಟಿಗಳನ್ನು ಮಾಡಿದ್ದೀರಿ. ಅವರು ಸಾಹುಕಾರರಾಗುವುದಿಲ್ಲವೇ ಸ್ವಾಮಿ ? 20 ಲಕ್ಷ ಕಟ್ಟಡ ಕಟ್ಟುತಕ್ಕವರು, ಟೆಂಡರ್ ಕರೆಯದೆ ಅವರೇ ಅಮಾನಿಯಾಗಿ ಕಟ್ಟುವಾಗ ಅವರು ಸಾಹುಕಾರರಾಗುದಿಲ್ಲವೇ ? ಅವರು ಕಾರು ತೆಗೆದುಕೊಳ್ಳುವುದಿಲ್ಲವೇ ? ಅದೇನಾದರೂ ಇರಲಿ, ನಾವು ಹುರುಳಿ ಕಾಳು ಹಿಟ್ಟು ತಿನ್ನುತ್ತೇವೆ, ಇನ್ನೂ ಸ್ವಲ್ಪ ಕಾಲ ಗಟ್ಟಿಯಾಗಿರುತ್ತೇವೆ.

ಸ್ವಾಮಿ, ಬಹಳ ಪ್ರಾಮುಖ್ಯವಾದುದು ಇಂಜಿನಿಯರಿಂಗ್ ಕಾಲೇಜ್ ವಿಷಯ. ಇಂಜಿನಿಯರಿಂಗ್ ಮತ್ತು ಡಿಪ್ಲೊಮಾದಲ್ಲಿ ಬಡ ಹುಡುಗರು ಸಾಲಮಾಡಿ ಓದುತ್ತಿದ್ದಾರೆ. ಮುಂದೆ ಕೆಲಸ ಸಿಕ್ಕುವುದಿಲ್ಲ ಎಂದು ಮೊನ್ನೆ ತಾನೇ ಮಾನ್ಯ ಮಂತ್ರಿಗಳಾದ ವೀರೇಂದ್ರ ಪಾಟೀಲರು ತಿಳಿಸಿದರು. ಹೀಗಾದರೆ ಬಡವರ ಗತಿ ಏನಾಗುತ್ತದೆ ? ಮೂರು-ನಾಲ್ಕು ಸಾವಿರ ರೂಪಾಯಿ ಕೊಟ್ಟು, ತಿಂಗಳಿಗೆ ನೂರು ರೂಪಾಯಿಗಳನ್ನು ಸಾಲ ಮಾಡಿ, ಬಡವರು ಆಸ್ತಿ ಮಾರಿ ಮಕ್ಕಳು ಮುಂದಕ್ಕೆ ಬರಲಿ ಎಂದು ಓದಿಸುತ್ತಾರೆ. ಅವರಿಗೆ ಕೆಲಸ ಸಿಕ್ಕದೆ ಹೋದರೆ ಅವರೆಲ್ಲ ಪಾಪರ್ ಆಗುತ್ತಾರೆ. ಸಿವಿಲ್ ಇಂಜಿನಿಯರಿಂಗ್ ಪಾಸ್ ಮಾಡಿರುವವರೆಲ್ಲ ಫಕೀರರಾಗಿ ಅಲೆಯುತ್ತಾರೆ. ಇಂಜಿನಿಯರಿಂಗ್ ಇಲಾಖೆಗೆ ಎಷ್ಟು ಜನ ಬೇಕು ಎಂದು ತಿಳಿದುಕೊಂಡು ಅಷ್ಟು ಜನಗಳಿಗೆ ಮಾತ್ರ ಓದಲು ಅವಕಾಶ ಕೊಟ್ಟರೆ ಒಳ್ಳೆಯದು ಎಂದು ಕಾಣುತ್ತದೆ. ಮೆಡಿಕಲ್ ಕಾಲೇಜಿನಲ್ಲಿ ಓದಿದರೆ ಅವರಿಗೆ ಕೆಲಸ ಸಿಕ್ಕದೆ ಇದ್ದರೂ ಅವರೇ ಕೆಲಸಮಾಡಿ ಏನಾದರೂ ಸಂಪಾದನೆ ಮಾಡಿಕೊಳ್ಳುತ್ತಾರೆ. ಇಂಜಿನಿಯರ್ ಓದಿದವರಿಗೆ ಕೆಲಸ ಸಿಕ್ಕದ ಹೋದರೆ ಅವರ ಮನೆ ಹಾಳಾಗಿ ಅವರು ಮುಂದೆ ಬರುವುದಕ್ಕಾಗುವುದಿಲ್ಲ.

ಖಾಸಗಿ ಇಂಜನಿಯರಿಂಗ್ ಕಾಲೇಜುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಖಾಸಗಿಯವರು ಐದಾರು ಲಕ್ಷ ರೂಪಾಯಿಗಳ ಬಂಡವಾಳವನ್ನು ಹಾಕಿ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಾರೆ. ಅಂಥ ಕಾಲೇಜನ್ನು ಪ್ರಾರಂಭಿಸಲು 60 ಲಕ್ಷ ರೂಪಾಯಿ ಬೇಕು ಎಂದು ನಾನು ಹೇಳಿದ್ದೇನೆ. ಇದಕ್ಕಾಗಿ ದುಡ್ಡು ಬೇಕು ಎಂದು ಹುಡುಗರನ್ನು ಕೇಳುತ್ತಾರೆ. ತಂದೆ ತಾಯಿಗಳು ಎಲ್ಲಿಯಾದರೂ ಸಾಲಮಾಡಿ ಹಣ ಕೊಡಬೇಕು. ಸಾಲಮಾಡಿ ಒಂದು ವೇಳೆ ಹಣವನ್ನು ಕೊಟ್ಟರೂ ಮುಂದೆ ಕೆಲಸ ಸಿಕ್ಕುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಇದೆ. ಈ ದೃಷ್ಟಿಯಿಂದ ಸರ್ಕಾರದವರು ಖಾಸಗಿ ಕಾಲೇಜುಗಳನ್ನು ವಹಿಸಿಕೊಂಡು ಬಡವರಿಗೆ ಉಚಿತವಾಗಿ ಓದಿಸಬೇಕು ಮತ್ತು ರೈತರಿಗೆ ಉಪಕಾರ ಮಾಡಿ ತಂದೆ ತಾಯಿಗಳಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

[MR. SPEAKER in the Chair]

ಇಂಜಿನಿಯರಿಂಗ್ ಇಲಾಖೆ ಬಹಳ ಮುಖ್ಯವಾದುದು. ದುಡ್ಡು ಕಾಸು ಖರ್ಚು ಮಾಡಬೇಕಾದರೂ ಬಹಳ ಪವಿತ್ರವಾಗಿ ಖರ್ಚು ಮಾಡಬೇಕು. ಆಯಾ ತಾಲ್ಲೂಕಿನಲ್ಲಿ ಹುಟ್ಟಿ ಬೆಳೆದವರನ್ನು ಆಯಾ ತಾಲ್ಲೂಕಿಗೇ ಕೆಲಸ ಮಾಡಲು ಹಾಕಿ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದಕ್ಕೆ ಅವಕಾಶ ಕೊಟ್ಟರೆ ಎಷ್ಟರ ಮಟ್ಟಿಗೆ ನ್ಯಾಯ ದೊರಯುತ್ತದೆ ಎನ್ನುವುದನ್ನು ಮಾನ್ಯ ಹಣಕಾಸಿನ ಸಚಿವರು ಯೋಚನೆಮಾಡಬೇಕು. ಇಂಥ ಸಂದರ್ಭಗಳಲ್ಲಿ ಏನೇನು ಕೆಲಸ ಮಾಡಿದ್ದಾರೆ, ಸರಿಯಾಗಿ ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ವಿಚಾರಮಾಡಿ ಅನ್ಯಾಯವಾಗಿದ್ದರೆ ಅಂಥವರನ್ನು ಕೂಡಲೇ ಅಲ್ಲಿಂದ ಬೇರೆ ಕಡೆಗೆ ಹಾಕಬೇಕು. ಇದಕ್ಕಾಗಿ ಒಂದು ಅಪೀಲುಮಾಡಿ ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before the next Member begins, I have to say a word. I have got about four or five names that have been sent to me. I believe a few Independants and some others have not had any chance at all. I do not know how to co-ordinate. Would not the Members be satisfied if I give chance to them on the particular Demands? If there is any Member who will not be able to be present, he may tell me.

Sri SANJEEVANATH AIKALA (Surathkal).—Even on Demands, we would not get sufficient time.

Mr. SPEAKER.—It is because the Whips do not co-ordinate. I am adhering to the list given by the Whips.

Sri SANJEEVANATH AIKALA.—I suggest that one more day may be allotted for this.

Mr. SPEAKER.—Simply because members do not co-ordinate, the Hon'ble Member suggests one more day?

Sri SANJEEVANATH AIKALA.—Even then, it would not be sufficient because there are some more speakers.

Mr. SPEAKER.—How can there be more speakers if the members do not co-ordinate? They must restrict their time and see that it is properly distributed.

Sri SANJEEVANATH AIKALA.—If there are very important things to be spoken on the budget, naturally the time allotted will not be sufficient.

Mr. SPEAKER.—Which party does the Hon'ble Member belong to?

Sri SANJEEVANATH AIKALA.—P.S.P.

Mr. SPEAKER.—The leader of the P. S. P. is a member of the Business Advisory Committee and the Member must be in touch with his leader or whip and must not appeal to the Chair like this. Anyway, I will see what I can do.

Sri SANJEEVANATH AIKALA.—Now, I appeal to the Chair Sir, to do the needful.

Mr. SPEAKER.—The Hon'ble Member is approaching a wrong person at a wrong time.

ಶ್ರೀ ಎನ್. ಹುಚ್ಚಮಾಸ್ತಿ ಗೌಡ—ಒಟ್ಟು ಇದಕ್ಕೆ ಗೊತ್ತಾಗಿದ್ದ ಕಾಲ 14 ಘಂಟೆಗಳ ವರೆಗೆ. ಇವತ್ತು ಹೆಚ್ಚು ಹೊತ್ತು ಬೇರೆ ಕಾರ್ಯಕ್ರಮಕ್ಕೋಸ್ಕರ ವಿನಿಯೋಗವಾಯಿತು. ಆ ರೀತಿ ಬೇರೆ ಕಾರಣ ಬಂದಿದ್ದರಿಂದ........

ಅಧ್ಯಕ್ಷರು.—ಯಾವ ಕಾರಣದಿಂದಾಯಿತು!

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಚಂದ್ರಶೇಖರಪುರ).—ಯಾವ ಕಾರಣದಿಂದಲೋ ಆಯಿತು. ಈಗ ಇದಕ್ಕೆ ಗೊತ್ತಾದ ಕಾಲ ವಿನಿಯೋಗವಾಗಿರುವುದರಿಂದ ನಾಳೆ ಪ್ರಶ್ನೋತ್ತರ ವೇಳೆಯನ್ನು ನಿಲ್ಲಿಸುವುದಕ್ಕೆ ಸಾಧ್ಯವಾದರೆ ನಿಲ್ಲಿಸಬಹುದು. ಹಾಗಿಲ್ಲದೇ ಹೋದರೆ ಮಧ್ಯಾಹ್ನ ಅರ್ಧ ಘಂಟೆ ಕಾಲ ವಿರಾಮ ಕೊಡುವುದಕ್ಕೆ ಬದಲಾಗಿ ಆ ಸಮಯವನ್ನು ಉಪಯೋಗಿಸಿಕೊಂಡು ಒಂದು ಘಂಟೆ ಕಾಲ ಹೆಚ್ಚು ಕೂತುಕೊಂಡು ಕೆಲವು ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಡುವುದು ಸೂಕ್ತವೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಸಿದ್ಧಯ್ಯ ಕಾಶೀಮಠ್.—ಪ್ರಶ್ನೋತರ ವೇಳೆ ಇರಬೇಕು. ಅದು ಇಲ್ಲದೇ ಹೋದರೆ ಹೇಗೆ ಸಾಧ್ಯ? The question hour must be there. After that Minister will reply.

Mr. SPEAKER.—The tea break need not be utilised. We may sit one hour later. Instead of getting up at 6 p.m. we may sit till 7 p.m.

Sri B. D. JATTI.—Generally I am opposed to sitting after 6 p.m. At the fag end of the day nobody will be interested in hearing any reply and I will also be not interested in replying.

Sri SIDDIAH KASIMATH.—It may be postponed to Wednesday.

Mr. SPEAKER.—In the light of the suggestions made by Hon ble Members, I wish to take the sense of the House on it. Does the House agree that this discussion will go on tomorrow and that day after tomorrow there will be no Question Hour and the reply will be for two hours *i.e.* from 12 noon to 2 p.m.?

HON'BLE MEMBERS.—Yes. (The House agreed to it).

Sri B. R. SUNTHANKAR (Belgaum City).—Mr. Speaker, Sir, while speaking on the last year's budget, I had described the budget as a pedestrian budget meaning thereby that it was a simple ordinary budget without having any special features. But this year's budget has become worse; it has become a 'lame' budget; because there is a deficit of Rs. 391 lakhs and that deficit is kept hanging. The Government or the Hon'ble Finance Minister has no plan to meet that deficit. He is simply depending upon some normal shortfalls and some reserves and he has not explicitly shown the way as to how to meet that deficit. His attitude is like somehow something will happen and the deficit will be wiped out. So, I am reminded of a well known character in Charles Dickens' novel 'David Copperfield'. There he has depicted the typical character of Micawber. He never used to make both ends meet. So, every time he was hoping that something will turn up. That is the attitude of our Finance Minister. He has turned out to be a Macawber; perhaps his officers made him a Micawber. It is surprising indeed.

The Finance Minister has claimed that the Government are trying their best to satisfy the aspirations of the people. That is simply a platitude. There are so many platitudes in this budnet speech. Generally, the Hon'ble Finance Minister Sri Jatti is not a man to indulge in platitudes but this time he has done that. But the performance and achievements of Government during the last few years do not bear out the Finance Minister's complacency; they are far from satisfactory. The performance of the Government during the last few years does not assure us a better future and does not create confidence in the minds of the people that the future would be any better. The complacency that has been shown by the Hon'ble the Finance Minister in his budget speech is simply surprising. He has said that agricultural production has been satisfactory and that industrial production is increasing but actual facts fail to justify this complacency and optimism. In the statistics for the last 5 years from 1959-60 to 1963-64 we are given a picture of the Mysore budget. The figures that are supplied by the Government show very poor progress. Rise in food production is only 1.1 per cent during the five years in spite of the heavy expenditure that has been incurred during that eriod and in spite of planning for the last 14 years. The production

in pulses, oil seeds and cotton has actually gone down considerably. Fourteen years of planning has landed the country in a food crisis and we cannot say that even now we are out of that crisis. Perhaps the crisis may persit.

Similarly, about industrial production except finished steel, production in other fields has actually declined. Unfinished steel, sulphuric acid, copper sulphate, super phosphate, cotton cloth and even sandalwood oil which is the monopoly of the State, have all registered a decline in production. This is certainly not creditable. In mining production has very much declined. Particularly in metallic minerals production has gone down very much. If you take the per capita income, it has also declined from Rs. 295 to Rs. 290. The per capita income in Mysore is far below the Indian average. As against the all-India average of Rs. 326 the Mysore per capita is only Rs. 290, that means, Rs. 36 less. As far as employment is concerned, the speech admits that there have been fewer opportunities of employment. Unemployment is increasing and population is increasing at a faster rate than production. All this results in increasing unemployment and this results in lack of surplus.

Similarly, domestic savings are also being wiped out. Particularly, this year with the soaring priees people are very much hard hit and whatever domestic savings people had, that has already been totally wiped out. That is the picture of the economic condition and the economic trend in the State.

Similarly, the achievements in the various plan schemes are not commensurate with the expenditure. Our whole planning has been expenditure-oriented and not achievement and performance-oriented. That has been the greatest defect with our planning. Our performance is very poor. This picture is very gloomy and does not hold out any hope for better future. The Government have no plan or perspective to remedy the ills facing the State. In developing countries budgets have got a special significance, because in developing countries like India the basic need of the day is rapid economic development. We have to achieve economic development of the country at a very rapid pace. The resources at our disposal are very limited and so all development activities mainly depend upon Governmental efforts. That is why the budgets play a very important role in developing countries like India. In the past, the function of the budget was to regulate the finances and to balance the revenue and expenditure. A balanced budget used to be considered as an ideal and the best budget. That was in pre-independent India, but now in independent and developing India the budget assumes a special importance because the nation has set before itself certain ideals, the ideal of welfare State and socialistic pattern of society. The nation has kept before itself these objectives and so the aims of our budget should be to achieve these objectives. Mr. Wakkal, one of the authorities on

(Sri B. R. SUNTHANKAR)

budget and financing, has rightly put the objectives or the functions of a budget in India. In his book "Parliamentary Financial Control in India" Mr. Wakkal says:

> "The budget has now become instrument of social policy in realising the plans of the Government for increasing production, correcting inequalities in the distribution of wealth and maintaining employment..."

So budgets have become instruments of social policy and the budgets have to achieve the 3 objectives. One is increasing production, the other is correcting inequalities and disparities and the third is maintaining employment and affording more and more scope for employment. These are the three objectives of budget in a country like India. If you apply these 3 criteria to the present budget, what is the picture that this budget presents before us? On all these counts, namely increasing production. removing disparities and giving more and more employment, the Government has failed and utterly failed.

About agricultural production, I have already pointed out that the production is going down and it is not keeping pace with the growing demand. If we fail to step up our production at a rapid rate and if we fail to control population which is growing at an enormous rate, if we are not able to keep the growth of population under control, we are afraid in a few years' time, the State may go to ruins.

Similarly, about industrial production, Mysore was once the pioneer in industrial development, but now it is lagging far behind as compared to other States. The contribution of Mysore State to the total industrial production in the country is only to the extent of 4 to 5%. It is very little. The industrial growth of Mysore in recent years is the least in the southern zone. I have got the figures with me, but as I have no time I do not want to quote the figures. Comparatively speaking, industrial growth in Mysore State is the least in the Southern Zone as compared to Madras, Kerala and Andhra. Very little progress has been made during the last 15 years.

The agricultural population was 71.2 per cent in 1951 in Mysore State. In 1961 the agricultural population is 70.6 per cent, *i.e.*, there has been decrease of only 6 per cent. That means still the economy of the State is overwhelmingly agricultural and that shows that there has not been the required industrial growth in the State. That is due to very very slow growth in industries.

Now I will come to the second point, that is disparities. There are wide disparities in all fields in various sections of the community in different areas. The disparities and inequalities are astounding. Large areas have remained backward. They are being neglected and no concerted effort is being made to devalop these backward areas. Backwradness

is so much in our State that the whole State may be called backward State except a few areas like Bangalore City. Mr. M. B. Nanjappa and similarly the National Council of Economic Research and some other authorities have made some study regarding the economic trends in Mysore State and regarding the backwardness and region-wise backwardness in the State and their findings are revealing. The inequalities and disparities are, as I have already said, wide in almost all fields. There are vast disparities in the *per capita* income. In the district-wise *per capita* income, there are marked differences between the *per capita* income of the different districts.

The State average is 290. While Tumkur District is least with Rs. 146 *per capita* income, Coorg is highest with 361 *per capita* income. Chickmagalur is 334. Bangalore and Belgaum 202 and other districts varying between these figures. Here also even the districtwise disparity between the *per capita* income is very much.

Mr. SPEAKER.—Now the House will rise and reassemble tomorrow at 1 p.m.

The House adjourned at Six of the Clock to meet again at One of the Clock on Tuesday, the 9th March 1965.